ಸಂಪುಟ: 45
ಸಂಚಿಕೆ: 04
ಮೇ 2020
ಪುಟಗಳು: 12

॥ ರಾಷ್ಟ್ರ ದೇವೋ ಭವ ॥

# ರಾಷ್ಟ್ರೋತ್ಥಾನ ವಾರ್ತಾ

ರಾಷ್ಟ್ರೋತ್ಥಾನ ಪರಿಷತ್ ಪರಿವಾರ ಪತ್ರಿಕೆ | ಖಾಸಗಿ ಪ್ರಸಾರಕ್ಕಾಗಿ

rashtravartha@gmail.com  Rashtrotthanaparishat1965  Rashtrotthana_p

## ಕೊರೋನಾ ಸಂದರ್ಭದಲ್ಲಿ ವೈದ್ಯರ ಸೇವೆ ಶ್ಲಾಘನೀಯ

■ ಮಂಗೇಶ್ ಭೇಂಡೆ

**ಬೆಂಗಳೂರು:** ಕೊರೋನಾ ಸಂದರ್ಭದಲ್ಲಿ ವೈದ್ಯರ ಸೇವೆ ಶ್ಲಾಘನೀಯವಾದುದು. ದೇಶರಕ್ಷಿಸುವ ಸೈನಿಕನ ಸೇವೆಯಂತೆ ಶ್ರೇಷ್ಠವಾದುದು ಎಂದು ಆರೆಸ್ಸೆಸ್‌ನ ಮಂಗೇಶ್ ಭೇಂಡೆ ಅವರು ತಿಳಿಸಿದರು.



ಅವರು ಮೇ 8ರಂದು ಹುಬ್ಬಳ್ಳಿಯ ಶಾ ದಾಮಜಿ ಜಾದವಜಿ ಛೆಡ್ಡಾ ಮೆಮೋರಿಯಲ್ ರಾಷ್ಟ್ರೋತ್ಥಾನ ರಕ್ತನಿಧಿ ಹಾಗೂ ಸೇವಾಭಾರತಿಯ ವತಿಯಿಂದ ಕೇಶವ ಕುಂಜದಲ್ಲಿ ನಡೆದ ಕೊರೋನಾ ಸೇನಾನಿಗಳಾದ ವೈದ್ಯರ ಸಂಮಾನ ಕಾರ್ಯಕ್ರಮದಲ್ಲಿ ಸಂಮಾನ ನೆರವೇರಿಸಿ ಮಾತನಾಡಿದರು.

ತಮ್ಮ ಆರೋಗ್ಯವನ್ನೂ ಲೆಕ್ಕಿಸದೇ ಕೊರೋನಾ ಪೀಡಿತರ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ವೈದ್ಯರನ್ನು ಗೌರವಿಸುವುದು ಸಮಾಜದ ಕರ್ತವ್ಯ. ವೈದ್ಯೋ ನಾರಾಯಣ ಎಂಬುದು ನಿಜವಾದುದು ಎಂಬುದರ ಅರಿವು ಈ ಸಂದರ್ಭದಲ್ಲಿ ನಮಗಾಗಿದೆ ಎಂದು ಅವರು ವೈದ್ಯರ ಸೇವೆಯನ್ನು ಶ್ಲಾಘಿಸಿದರು.

ಅನಾಹುತಗಳಾದಾಗಲೆಲ್ಲ ಸಂಘದ ಸ್ವಯಂಸೇವಕರು ಸಮಾಜದ ನೆರವಿಗೆ ಬಂದಿರುವುದು ನಮಗೆಲ್ಲ ತಿಳಿದೇ ಇದೆ. ಕೊರೋನಾ ಮಹಾಮಾರಿಯ ಸಂದರ್ಭದಲ್ಲಿಯೂ ಅವರು ಸೇನಾನಿಗಳಂತೆ ಜನರಿಗೆ ಅಗತ್ಯ ವಸ್ತುಗಳನ್ನು ತಲುಪಿಸುವ, ಅವರ ರಕ್ಷಣೆಯ ಕಾರ್ಯವನ್ನು ನಿರ್ವಹಿಸಿದರು ಎಂದ ಅವರು ಕೊರೋನಾ ಸಂದರ್ಭದಲ್ಲಿ ಇಡೀ ಸಮಾಜ ದಧೀಚಿ ಮಹರ್ಷಿಯಂತೆ ನಡೆದುಕೊಂಡಿತು ಎಂದು ಶ್ಲಾಘಿಸಿದರು. ತಮಗೆ ತಾತ್ಕಾಲಿಕವಾಗಿ ಆಗುವ ಎಲ್ಲ ಸಂಕಟಗಳನ್ನೂ ಸಹಿಸಿ ಈ ಮಹಾಮಾರಿಯ ವಿರುದ್ಧ ಹೋರಾಟ ನಡೆಸಿದರು. ಅವರೆಲ್ಲರೂ ಅಭಿನಂದನೆಗೆ ಅರ್ಹರು ಎಂದರು.

**ಧನ್ಯವಾದ ಸಮರ್ಪಣೆ:** ಕೊರೋನಾ ಪೀಡಿತರ ಆರೈಕೆಯಲ್ಲಿ ತೊಡಗಿಸಿಕೊಂಡಿರುವ ಹುಬ್ಬಳ್ಳಿ–ಧಾರವಾಡದ ವೈದ್ಯರುಗಳಾದ ಡಾ. ಬಾಲಾಜಿ ಆಸ್ಪತ್ರೆಯ ಕ್ರಾಂತಿ ಕಿರಣ್, ಶಕುಂತಲಾ ನರ್ಸಿಂಗ್ ಹೋಂನ ಡಾ. ವಿಜಯ ಗಡಗಿ, ಕಿರಣ್ ಗುಡ್ಡದಕೇರಿ, ಡಾ. ಶರತ್ ನರೇಗಲ್, ಡಾ. ಅಂಜಲಿ ನರೇಗಲ್, ಡಾ. ಮಹೇಶ್ ನಾಲವಾಡ್, ಡಾ. ಬಸವಂತ ಮೋಹಿತೆ, ಡಾ. ರವೀಂದ್ರ, ಡಾ. ಮಲ್ಲಪ್ಪನ ಪಾಟೀಲ್, ಡಾ. ಮಲ್ಲಿಕಾರ್ಜುನ್ ರಡ್ಡೇರ, ಡಾ. ಸೋಮಶೇಖರ್ ಹುದ್ದಾರ್, ಡಾ. ರಾಮಚಂದ್ರ, ಡಾ. ಸುಧೀರ್ ಜಂಬಗಿ, ಡಾ. ಆದಿತ್ಯ ಪಾಂಡುರಂಗಿ ಮುಂತಾದವರನ್ನು ಅವರು ಸಂಮಾನಿಸಿದರು.

ಹುಬ್ಬಳ್ಳಿಯ ಉದ್ಯಮಿಗಳಾದ ಶಿವಾನಂದ್ ಅವಟಿ, ಸೇವಾಭಾರತಿಯ ಅಧ್ಯಕ್ಷರಾದ ರಘೋತ್ತಮ ಅಕಮಂಚಿ, ರಾಷ್ಟ್ರೋತ್ಥಾನ ರಕ್ತನಿಧಿಯ ಟ್ರಸ್ಟಿ ದತ್ತಮೂರ್ತಿ ಕುಲಕರ್ಣಿ ಅವರು ಉಪಸ್ಥಿತರಿದ್ದರು.



ಪುಟ ತೆರೆದಂತೆ...
2 ಸಾವರ್ಕರ್ ಪುಸ್ತಕಗಳಿಗೆ ವಿಶೇಷ ರಿಯಾಯಿತಿ
4 ಆತ್ಮನಿರ್ಭರ ಭಾರತ – ವಿಶೇಷ ಲೇಖನ
ಪುಟ 8



# ನಿಮ್ಮೊಂದಿಗೆ

**ಪ್ರಿಯ ಬಂಧು, ಸಾದರ ವಂದೇ...**

ಕೊರೋನಾ ಮಹಾಮಾರಿಯ ಆತಂಕದಲ್ಲಿರುವ ಭಾರತಕ್ಕೆ ಪ್ರಧಾನಿ ಮೋದಿ 'ಆತ್ಮನಿರ್ಭರ ಭಾರತ'ವನ್ನು ನಿರ್ಮಿಸುವ ಕರೆ ನೀಡಿದ್ದಾರೆ. ಈ ಆತ್ಮನಿರ್ಭರ ಎಂದರೆ ಏನು ಎಂಬುದನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹರಾದ ದತ್ತಾತ್ರೇಯ ಹೊಸಬಾಳೆ ಅವರು ಬಹಳ ಸೊಗಸಾಗಿ ತಿಳಿಸಿಕೊಟ್ಟಿದ್ದಾರೆ. "ಆತ್ಮನಿರ್ಭರ ಭಾರತ ಎಂದರೆ ಸ್ವಾವಲಂಬೀ ಸ್ವಯಂಪೂರ್ಣ ಭಾರತ. ಸ್ವಯಂಪೂರ್ಣತೆ ಮತ್ತು ಸ್ವಾವಲಂಬನೆ ಎನ್ನುವುದು ಕೇವಲ ಆರ್ಥಿಕ ದೃಷ್ಟಿಯ ವಿಷಯವಲ್ಲ. ಇದರಲ್ಲಿ ಆರ್ಥಿಕತೆಗೆ ಪ್ರಾಧಾನ್ಯ ಇದ್ದರೂ ಇದು ಅದನ್ನು ಮೀರಿರುವಂತಹದ್ದು ಮತ್ತು ವ್ಯಾಪಕವಾದದ್ದು. ನನಗೆ ನಾನೇ ಹೊರೆಯಾಗದಂತೆ, ಆತ್ಮಕ್ಕೆ ನಾನು ಹೊರೆಯಾಗದಂತೆ ಇರುವುದು ಹೇಗೆ? ಇದರಲ್ಲಿ ಒಂದು ಆಧ್ಯಾತ್ಮಿಕತೆಯೂ ಅಡಗಿದೆ. ನನ್ನ ಮನೆಗೆ ನಾನು ಭಾರವಾದಾಗ ಆ ಮನೆ ಸಂಕಷ್ಟಕ್ಕೆ ಸಿಲುಕುತ್ತದೆ. ಅದು ಮುನ್ನಡೆಯಲು ಸಾಧ್ಯವಾಗುವುದಿಲ್ಲ. ಹೀಗಾಗಿ ನಾನು ನನ್ನ ಮನೆಗೆ, ನನ್ನ ಸಮಾಜಕ್ಕೆ, ನನ್ನ ದೇಶಕ್ಕೆ ಅನುಕೂಲಕರವಾಗಿ, ಸೃಜನಾತ್ಮಕವಾಗಿ ಕೊಡುಗೆ ನೀಡುವವನಾದಾಗ ನಾನು ನನಗೆ ಭಾರವಾಗುವುದಿಲ್ಲ, ನಾಡಿಗೆ ಭಾರವಾಗುವುದಿಲ್ಲ. ನನಗೆ ನಾನೇ ಭಾರವಾಗದಂತೆ ಇರಬೇಕಾದರೆ, ನನ್ನೊಳಗಿನ ಚೇತನವನ್ನು ನಾನು ಜಾಗೃತವಾಗಿಡಬೇಕು. ನನ್ನೊಳಗೆ ಆ ಸಾಮರ್ಥ್ಯವನ್ನು, ಕ್ಷಮತೆಯನ್ನು ತುಂಬಿಕೊಳ್ಳಬೇಕು. ಆತ್ಮವಿಶ್ವಾಸದಿಂದ ನಾನು ಮೇಲೇಳಬೇಕು. ನನ್ನೊಳಗೆ ಜ್ಞಾನದ ಹರವನ್ನು ಹರಡಬೇಕು. ಆಗ ನಾನು ಸಮರ್ಥನಾಗುತ್ತೇನೆ. ಇದೇ ಮಾತು ಸಮಾಜಕ್ಕೂ ದೇಶಕ್ಕೂ ಅನ್ವಯಿಸುತ್ತದೆ" – ಎಂದಿದ್ದಾರೆ.

ಕೆಲವರಿಗೆ ನಾವು ಸ್ವಯಂಪೂರ್ಣರೂ, ಸ್ವಾವಲಂಬಿಗಳೂ ಆಗುವುದು ಸಾಧ್ಯವೇ ಎಂಬ ಪ್ರಶ್ನೆ ಉದ್ಭವಿಸಬಹುದು. ಇದು ಸಾಧ್ಯ. ಟೆಕ್ನಾಲಜಿಗೆ ಸಂಬಂಧಿಸಿದ ವಿಷಯಗಳಿಗೆ ಕೆಲವು ಸಮಯ ತೆಗೆದುಕೊಳ್ಳಬಹುದು. ಆದರೆ ಉಳಿದ ಸಂಗತಿಗಳಲ್ಲಿ ಈ ಗುರಿಯನ್ನು ಸಾಧಿಸಬಹುದು. ಇದಕ್ಕಾಗಿ ನಾವು ಮಾನಸಿಕವಾಗಿ ಸಿದ್ಧರಾಗಬೇಕಾಗಿದೆ. ಸ್ವದೇಶೀ, ಸ್ವಾವಲಂಬನೆ ಎಂದರೆ ಏನು ಎನ್ನುವುದರ ಕುರಿತು ನಮ್ಮ ಅಧ್ಯಕ್ಷರಾದ ಎಸ್.ಆರ್. ರಾಮಸ್ವಾಮಿ ಅವರು ಇದೇ ಸಂಚಿಕೆಯಲ್ಲಿ (ಪುಟ 4ರಲ್ಲಿ) ಲೇಖನವನ್ನು ಬರೆದಿದ್ದಾರೆ. ಅದು ನಮ್ಮಲ್ಲಿ ಆತ್ಮನಿರ್ಭರ ಭಾರತ ನಿರ್ಮಾಣಕ್ಕೆ ವಿಶ್ವಾಸ ಮತ್ತು ಕಾರ್ಯಸಾಧ್ಯತೆಯ ಬೆಳಕು ನೀಡುತ್ತದೆ ಎಂದು ಭಾವಿಸುತ್ತೇನೆ.

ಕೊರೋನಾ ನಮ್ಮಲ್ಲಿ ಮತ್ತೊಮ್ಮೆ ಭಾರತೀಯತೆಯನ್ನು ಜಾಗೃತಗೊಳಿಸಿದೆ. ಭಾರತೀಯ ಆಚಾರ ವಿಚಾರಗಳು ಗೊಡ್ಡು ಸಂಪ್ರದಾಯ ಎನ್ನುತ್ತಿದ್ದ ಪಾಶ್ಚಾತ್ಯರಿಗೆ ಇಂದು ಇದರ ನೈಜತೆ ಶ್ರೇಷ್ಠತೆಯ ದರ್ಶನವಾಗುತ್ತಿದೆ. ಇದನ್ನು ಜಗತ್ತು ಸ್ವೀಕರಿಸುವ ಮನಸ್ಸಿನಲ್ಲಿದೆ. ನಾವೂ ಅದನ್ನು ಜೀವನಪದ್ಧತಿಯಾಗಿ ಪುನರೂಢಿಸಿಕೊಳ್ಳೋಣ.

ಸಂಕಟ ನಮಗೆ ಇನ್ನಷ್ಟು ಪ್ರೇರಣೆ ನೀಡುತ್ತದೆ. ನಮ್ಮೆಲ್ಲ ಚಟುವಟಿಕೆಗಳನ್ನು ಇನ್ನಷ್ಟು ಸಮಾಜಮುಖಿಗೊಳಿಸುವ ಚಿಂತನೆಯಲ್ಲಿ ನಾವು ಮುಂದೆ ನಡೆಯೋಣ.

ಇಂತಿ ಭವದೀಯ,

**ನಾ. ದಿನೇಶ್ ಹೆಗ್ಡೆ**

ಪ್ರಧಾನ ಕಾರ್ಯದರ್ಶಿ


ಸ್ವಾತಂತ್ರ್ಯವೀರ ಸಾವರ್ಕರ್ ಜನ್ಮದಿನದ ಪ್ರಯುಕ್ತ

**ರಿಯಾಯಿತಿ ದರದಲ್ಲಿ**



ನಾಲ್ಕು ಪುಸ್ತಕಗಳಿಗೆ (ಅಂಚೆ ವೆಚ್ಚ ಸೇರಿದಂತೆ) ಒಟ್ಟು ರೂ. 400 ಮಾತ್ರ

ಸಾವರ್ಕರ್ ಜೀವನ ಹಾಗೂ ಅವರ ಸಾಹಿತ್ಯಗಳ ಕುರಿತು ರಾಷ್ಟ್ರೋತ್ಥಾನ ಸಾಹಿತ್ಯ ಪ್ರಕಟಿಸಿರುವ 4 ಪುಸ್ತಕಗಳನ್ನು ವಿಶೇಷ ರಿಯಾಯಿತಿ ದರದಲ್ಲಿ ಓದುಗರಿಗೆ ನೀಡಲಾಗುತ್ತಿದೆ.

ಕೇರಳದ ಕಲ್ಲಿಕೋಟೆಯಲ್ಲಿ 1921ರಲ್ಲಿ ನಡೆದ ಮೋಪ್ಲಾ ದಂಗೆಯ ಕಥನದ ಕುರಿತು ಸಾವರ್ಕರ್ ಬರೆದ ಕಾದಂಬರಿಯ ಕನ್ನಡಾನುವಾದ – **ಮೋಪ್ಲಾ ಕಾಂಡ**



ಕಾಲಾಪಾನಿ ಶಿಕ್ಷೆಯ ಬಗ್ಗೆ ಸಾವರ್ಕರ್ ಅವರು ಬರೆದ ಕೃತಿಯ ಕನ್ನಡ ಅನುವಾದ – **ಕರಿನೀರ ರೌರವ**



ಚಕ್ರವರ್ತಿ ಸೂಲಿಬೆಲೆ ಅವರು ರಚಿಸಿರುವ – ಅಪ್ರತಿಮ ದೇಶಭಕ್ತ, ಸ್ವಾತಂತ್ರ್ಯವೀರ **ಸಾವರ್ಕರ್**



1857ರಲ್ಲಿ ನಡೆದದ್ದು ಸಿಪಾಯಿ ದಂಗೆಯಲ್ಲ; ಅದು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ದಾಖಲೆಗಳ ಮೂಲಕ ಸಾಬೀತುಪಡಿಸಿ ಸಾವರ್ಕರ್ ರು '1857–ಭಾರತದ ಸ್ವಾತಂತ್ರ್ಯ ಸಂಗ್ರಾಮ' ಎಂಬ ಕೃತಿಯನ್ನು ಬರೆದಿದ್ದಾರೆ. ಈ ಕುರಿತು ಚಕ್ರವರ್ತಿ ಸೂಲಿಬೆಲೆ ಅವರು ಕನ್ನಡದಲ್ಲಿ ಬರೆದ ಪುಸ್ತಕ – **ಸ್ವಾತಂತ್ರ್ಯ ಮಹಾಸಂಗ್ರಾಮ 1857**




ಇಲ್ಲಿ ಖರೀದಿಸಬಹುದು:

www.sahityabooks.com/shop/rashtrotthana-sahitya/savarkarbook

# ಗಾಂಧಿ ಮಹಾಭಾರತದ ವ್ಯಾಸ ಮಹರ್ಷಿಯನ್ನು ಹೋಲುತ್ತಾರೆ

**ಲೇಖಕ ಅರವಿಂದ ಚೊಕ್ಕಾಡಿ ಅವರು ತಮ್ಮ ಫೇಸ್‌ಬುಕ್‌ನಲ್ಲಿ ಬರೆದ ಪುಸ್ತಕ ವಿಮರ್ಶೆ**

ಮ.ಗ. ಶೆಟ್ಟಿ ಅವರು ಬರೆದಿರುವ, ರಾಷ್ಟ್ರೋತ್ಥಾನ ಸಾಹಿತ್ಯದವರು ಪ್ರಕಟಿಸಿರುವ 'ಮಹಾತ್ಮಾ ಮೋಹನ್ ದಾಸ್ ಕರಮಚಂದ ಗಾಂಧಿ – ನಾನೇಕೆ ಹಿಂದು?' – ಇತ್ತೀಚಿನ ದಿನಗಳಲ್ಲಿ ನಾನು ಓದಿದ ಬಹಳ ಒಳ್ಳೆಯ ಪುಸ್ತಕಗಳಲ್ಲಿ ಇದೂ ಒಂದು. ಇದರಲ್ಲಿರುವ ವಿಷಯಗಳು ನನಗೆ ಹೊಸದಲ್ಲ. ಇಲ್ಲಿನ ಬಹುತೇಕ ವಿಚಾರಗಳು ವಿವಿಧ ಸಂದರ್ಭಗಳಲ್ಲಿ ಮಹಾತ್ಮಾ ಗಾಂಧಿಯವರು ಮಾಡಿದ ಉಪನ್ಯಾಸ ಮತ್ತು ಬರೆದ ಬರಹಗಳನ್ನೆ ಆಧರಿಸಿವೆ. ಅವನ್ನು ನಾನು ಈ ಹಿಂದೆಯೇ ಓದಿದ್ದೆ. ಆದರೆ ವಿವಿಧ ವಿಚಾರಗಳ ಭಾಗವಾಗಿ ಬರುವ ಅವನ್ನೆಲ್ಲ ಕ್ರೋಢೀಕೃತ ರೂಪದಲ್ಲಿ ಹಿಡಿದಿಡುವ ಮಹತ್ಕಾರ್ಯವನ್ನು ಮ.ಗ. ಶೆಟ್ಟಿಯವರು ಮಾಡಿದ್ದಾರೆ. ಬಹುಶಃ ಇದನ್ನು ಗಾಂಧಿಯವರ ಹಿಂದೂ ಧರ್ಮದ ಕುರಿತ ಚಿಂತನೆಗಳು ಎಂದು ಕರೆಯಬಹುದು. ಆ ಚಿಂತನೆಗಳು ಹಿಂದೂ ಅಲ್ಲದವನೊಬ್ಬ ಮಾಡಿದ ಹಿಂದೂ ಧರ್ಮದ ಚಿಂತನೆಗಳೂ ಅಲ್ಲ. ಹಿಂದೂ ದ್ವೇಷಿಯೊಬ್ಬ ಮಾಡಿದ ಚಿಂತನೆಗಳೂ ಅಲ್ಲ, ಗಾಢವಾದ ಆತ್ಮಾವಲೋಕನದ ಶಕ್ತಿ ಇರುವ ಒಬ್ಬ ನಿಷ್ಠಾವಂತ ಹಿಂದೂ ತನ್ನ ಧಾರ್ಮಿಕ ಪರಂಪರೆಯನ್ನು ನಿರ್ಮೋಹದಿಂದ ಕಂಡ ಬಗೆಯನ್ನು ಈ ಕೃತಿಯಲ್ಲಿ ಕಾಣಬಹುದು. ಅಸ್ಪೃಶ್ಯತೆ ಉಳಿಯುವುದಾದರೆ ಹಿಂದೂ ಧರ್ಮ ನಾಶವಾಗಲಿ ಎನ್ನಬಲ್ಲ ಗಾಂಧಿ, ಈಶಾವಾಸ್ಯೋಪನಿಷತ್ತಿನ 'ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್ಧನಮ್' ಎಂಬ ಒಂದೇ ಶ್ಲೋಕದ ಉಳಿವು ಹಿಂದೂ ಧರ್ಮವನ್ನು ಚಿರಂಜೀವಿಯಾಗಿ ಉಳಿಸುತ್ತದೆ ಎನ್ನಬಲ್ಲರು. ಏಕೆಂದರೆ ಈ ಶ್ಲೋಕ ಅಸ್ಪೃಶ್ಯತೆಯೊಂದಿಗೆ ಸಂಘರ್ಷಕ್ಕಿಳಿಯುತ್ತದೆ.




ಗಾಂಧಿ ಜಾತಿಯನ್ನು ಒಪ್ಪುವುದಿಲ್ಲ, ಆದರೆ ವರ್ಣವನ್ನು ಒಪ್ಪುತ್ತಾರೆ. ಮೂಢನಂಬಿಕೆಯನ್ನು ಒಪ್ಪುವುದಿಲ್ಲ. ಆದರೆ ಧರ್ಮಶ್ರದ್ಧೆಯನ್ನು ಒಪ್ಪುತ್ತಾರೆ. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ ಆಶ್ರಮಗಳನ್ನು ಒಪ್ಪುತ್ತಾರೆ. 25 ರಿಂದ 50ನೇ ವಯಸ್ಸಿನ ವರೆಗೆ ಗೃಹಸ್ಥಾಶ್ರಮವನ್ನು ಸಫಲ ಮಾಡುತ್ತಾರೆ. ನಂತರದ 25 ವರ್ಷಗಳ ಕಾಲ ದಂಪತಿ ಸಾಂಸಾರಿಕ ಜೀವನದಿಂದ ಮುಕ್ತರಾಗಿ ಸಾಮಾಜಿಕ ಕಾರ್ಯಗಳಿಗೆ ತೊಡಗಬೇಕು ಎನ್ನುತ್ತಾರೆ.

ಗಾಂಧಿ ರಾಷ್ಟ್ರದ ಎದುರಾಳಿಯನ್ನು ಎದುರಿಸುತ್ತಾ ಬಂದದ್ದು ಹಿಂದೂ ಧರ್ಮದ ವೈಚಾರಿಕತೆಯ ಮೂಲಕ. ಒಮ್ಮೆ ವೈಸರಾಯ್ ಕರ್ಜನ್, "ಸತ್ಯದ ಪರಮೋಚ್ಚ ಕಲ್ಪನೆ ಪಾಶ್ಚಿಮಾತ್ಯ ಆದರ್ಶ" ಎಂದಾಗ ಗಾಂಧಿ 'ಇಂಡಿಯನ್ ಒಪೀನಿಯನ್' ಪತ್ರಿಕೆಯ ಮೂಲಕ ಕರ್ಜನ್ ತನ್ನ ಮಾತನ್ನು ಹಿಂದೆಗೆದುಕೊಳ್ಳುವಂತೆ ಒತ್ತಾಯಿಸುತ್ತಾರೆ. ಆಗ ಅವರು ಸಾಮವೇದ, ತೈತ್ತಿರೀಯ ಉಪನಿಷತ್, ಮಹಾಭಾರತ, ರಾಮಾಯಣ, ಭಗವದ್ಗೀತೆ, ಭಾಗವತಗಳ ಶ್ಲೋಕಗಳ ಆಧಾರದಲ್ಲಿ ಕರ್ಜನ್ ಹೇಳಿಕೆಯನ್ನು ತಳ್ಳಿ ಹಾಕುತ್ತಾರೆ.

ಹಿಂದೂ ಧರ್ಮದಲ್ಲಿ ಇರುವ ಅಸ್ಪೃಶ್ಯತೆ, ಜಾತೀಯತೆಗಳನ್ನು ಗಾಂಧಿ ಧರ್ಮದ ಆಧಾರದಲ್ಲಿಯೇ ನಿರಾಕರಿಸುತ್ತಾರೆ. "ಯಾವ ಋಷಿಮುನಿಗಳು ವೇದೋಪನಿಷತ್ತುಗಳಂತಹ ಗ್ರಂಥಗಳನ್ನು ಜಗತ್ತಿಗೆ ಕೊಟ್ಟರೋ, ಯಾರು ತಾವು ಉಚ್ಚರಿಸಿದ ಪ್ರತಿಯೊಂದು ಮಂತ್ರದಲ್ಲಿಯೂ ಈಶ್ವರನ ಅದ್ವೈತವನ್ನು ಉಪದೇಶಿಸಿದರೋ ಅಂತಹವರು ಅಸ್ಪೃಶ್ಯತೆಯನ್ನು ಉಪದೇಶಿಸಿದರು ಎಂದರೆ ನಂಬುವುದೇ ಕಷ್ಟವಾಗುತ್ತದೆ" ಎನ್ನುವ ಗಾಂಧಿ ಶುದ್ಧಾತ್ಮನು ಜಾತೀಯತೆಯಿಂದ ಹೊರಬರುವ ಎಲ್ಲ ಮಾರ್ಗಗಳನ್ನೂ ತೋರಿದ್ದಾರೆ.

ಹಿಂದೂಗಳ ನಡುವಿನ ದ್ವೈತ–ಅದ್ವೈತದ ಕಿತ್ತಾಟಗಳಿಗೂ ಗಾಂಧಿಯ ಬಳಿ ಉತ್ತರವಿದೆ. "ನಾನು ಸ್ವತಃ ಅದ್ವೈತಿಯೆಂದು ಭಾವಿಸಿದರೂ ದ್ವೈತವನ್ನು ಸಮರ್ಥಿಸಬಲ್ಲೆ.... ಈಶ್ವರನನ್ನು ನಾನು ಯಾವ ರೂಪದಿಂದ ಒಪ್ಪುವೆನೋ ಅದೇ ರೂಪದಿಂದ ವರ್ಣಿಸುತ್ತೇನೆ" ಎನ್ನುವುದು ಗಾಂಧಿಯ ಉತ್ತರ.

ಗಾಂಧಿ ಜೀವಿತದುದ್ದಕ್ಕೂ ಬಳಸಿದ್ದ ಮಹತ್ವದ ಧಾರ್ಮಿಕ ಪರಿಕಲ್ಪನೆ ಅಂತರ್ವಾಣಿಗೆ ನಿಷ್ಠನಾಗಿರುವುದು. ಅಂತರ್ವಾಣಿಯನ್ನು ಗಾಂಧಿ 'ಈಶ್ವರನ ಧ್ವನಿ' ಎಂದು ಕರೆಯುತ್ತಾರೆ. ನಾವು ಮಾಡುತ್ತಿರುವ ಯಾವುದು ಸರಿಯಲ್ಲ ಎಂಬುದನ್ನು ನಮ್ಮ ಮನಸ್ಸೇ ನಮಗೆ ಹೇಳುತ್ತಿರುತ್ತದೆ. ಇದೇ ಅಂತರ್ವಾಣಿ. ಈ ಅಂತರ್ವಾಣಿ ಹುಟ್ಟಬೇಕಾದರೆ ಮನುಷ್ಯರು ಯಾವ ನಿಯಮಗಳನ್ನು ಪಾಲಿಸಬೇಕು ಎಂದು ಗಾಂಧಿ ಹೇಳುತ್ತಾರೆ.

ಮತಾಂತರಕ್ಕೆ ಗಾಂಧಿ ವಿರೋಧಿ. ಗಾಂಧಿಯ ಮಾತಿನಲ್ಲೇ ಹೇಳುವುದಾದರೆ, "ನಾನು ಮತಪರಿವರ್ತನಕ್ಕೆ ವಿರೋಧಿಯಲ್ಲವಾದರೂ ಇಂದು ಅದಕ್ಕಾಗಿ ಅನುಸರಿಸುವ ಮಾರ್ಗಗಳಿಗೆ ವಿರೋಧಿಯಾಗಿದ್ದೇನೆ". ಅಂದರೆ ಗಾಂಧಿಯ ಪ್ರಕಾರ ಮತಾಂತರವೂ ಕೂಡ ಮತಾಂತರವಾಗುವವನ ಅಂತರ್ವಾಣಿಯ ಕರೆಯಿಂದ ಆಗಬೇಕು. ಅಂತಾದ್ದು ಎಲ್ಲಿ ಆಗಲು ಸಾಧ್ಯ! ಚೀನಾಕ್ಕೆ ಹೋಗುವ ಕ್ರೈಸ್ತ ಮಿಷನರಿಗಳಿಗೆ "ನೀವು ಮತ ಪ್ರಚಾರಕ್ಕೆ ಹೋಗುವುದಾದರೆ ಅಧಿಕಾರಿಗಳ ನೆರವನ್ನು ಕೇಳಬೇಡಿ. ಜೀವವನ್ನು ಮುಡುಪಿಟ್ಟು, ಚೀನಾದ ಜನರು ಕೊಂದರೂ ಧರ್ಮಕ್ಕಾಗಿ ಪ್ರಾಣ ಕೊಡುತ್ತಿದ್ದೇನೆ ಎಂಬ ಭಾವನೆಯಿಂದ ಅಲ್ಲಿಗೆ ಹೋಗಿರಿ" ಎಂದರು.

ಬ್ರಿಟಿಷ್ ಅರಸೊತ್ತಿಗೆ ಭಾರತಕ್ಕೆ ರಾಷ್ಟ್ರೀಯತೆಯ ಪರಿಕಲ್ಪನೆ ಯುರೋಪಿನಿಂದ ಬಂದಿತು ಎಂದಾಗ ಗಾಂಧಿ, "ಯುರೋಪಿಗಿಂತ ಸಾವಿರಾರು ವರ್ಷಗಳ ಮೊದಲೆ ಭಾರತ ಒಂದು ರಾಷ್ಟ್ರವಾಗಿದೆ. ಭಾರತ ರಾಷ್ಟ್ರವಾಗಿದ್ದುದರಿಂದಲೆ ಬ್ರಿಟಿಷರಿಗೆ ರಾಜ್ಯವನ್ನು ಸ್ಥಾಪಿಸಲು ಸಾಧ್ಯವಾಯಿತು" ಎಂದು ಭಾರತೀಯ ಅಖಂಡತೆಯನ್ನು ಧರ್ಮದ ಆಧಾರದಲ್ಲಿಯೇ ವಿವರಿಸಿದವರು ಗಾಂಧಿ.

ಗಾಂಧಿಗೆ ಭಗವದ್ಗೀತೆ ಪರಿಶೀಲನೆಗೆ ಒಳಪಡಿಸಬಾರದ "ಶ್ರೀ ಭಗವಾನುವಾಚ" ಕೃತಿಯಲ್ಲ. ಅವರು ಅದನ್ನು ಪರಿಶೀಲಿಸುತ್ತಾರೆ. ಗಾಂಧಿಯ ಪ್ರಕಾರ ಭಗವದ್ಗೀತೆ ಭೌತಿಕ ಯುದ್ಧದ ಬಗ್ಗೆ ಹೇಳುವುದಿಲ್ಲ. ಸದಾ ಕಾಲದಲ್ಲಿಯೂ ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಇರುವ ಅಂತರ್ಯುದ್ಧದ ಬಗ್ಗೆ ಹೇಳುತ್ತದೆ. ಅದ್ದರಿಂದಲೇ ಭಗವದ್ಗೀತೆಯು ಯುದ್ಧದಲ್ಲಿ ಕೊನೆಯಾಗುವುದಿಲ್ಲ. ಸ್ಥಿತ ಪ್ರಜ್ಞನ ಲಕ್ಷಣಗಳನ್ನು ಹೇಳುವುದರ ಮುಖಾಂತರ ಕೊನೆಯಾಗುತ್ತದೆ.

ಈ ಕೃತಿ ಹೇಳುವ ವಿಶೇಷ ಸಂಗತಿ ಎಂದರೆ ಗಾಂಧಿ ಧರ್ಮವನ್ನು ವ್ಯಾಖ್ಯಾನಿಸುತ್ತಾರೆ. ಧರ್ಮದ ಆಧಾರದಲ್ಲಿ ಸ್ತ್ರೀಯರ ನ್ಯಾಯ, ಆರ್ಥಿಕತೆ, ಶಿಕ್ಷಣ ಎಲ್ಲದರ ಬಗ್ಗೆಯೂ ಮಾತನಾಡುತ್ತಾರೆ. ಆದರೆ ಗಾಂಧಿ ಧರ್ಮವನ್ನು ವಿವರಿಸುವ ಕ್ರಮ ಮಠಾಚಾರ್ಯರಂತೆಯೂ ಅಲ್ಲ, ಸೆಕ್ಯುಲರ್‌ಗಳಂತೆಯೂ ಅಲ್ಲ, ಸ್ವಾಮೀಜಿಗಳಂತೆಯೂ ಅಲ್ಲ, ಪುರೋಹಿತರಂತೆಯೂ ಅಲ್ಲ. ಅದು ಗಾಂಧಿಯದೇ ಕ್ರಮ. ಆ ಕ್ರಮದ ಹಿಂದೆ ಇರುವುದು ಭಾರತದ ಆಳವಾದ ಅನುಭವಗಳು. ಬಹಳ ತೆಳುವಾಗಿ ಗಾಂಧಿಯದು ಮಹಾಭಾರತದ ವ್ಯಾಸ ಮಹರ್ಷಿಯ ಕ್ರಮವನ್ನು ಹೋಲುತ್ತದೆ. ವ್ಯಾಸರು ಮಹಾಭಾರತದೊಳಗಿರುವ ಒಂದು ಪಾತ್ರ, ಮತ್ತು ಕೌರವ–ಪಾಂಡವರೆಲ್ಲರೂ ಅವರ ಸಂತಾನದ ಸಂತಾನ. ಆದರೂ ನಿರ್ಮೋಹದಿಂದ ಅವರು ಮಹಾಭಾರತವನ್ನು ವಿವರಿಸಬಲ್ಲರು. ಅದೂ ಕೂಡ ಹೆಚ್ಚು ಕಡಿಮೆ ಸಮಗ್ರ ಭಾರತದ ಅನುಭವದಲ್ಲಿ ನಡೆಯುತ್ತದೆ ಮತ್ತು ಸ್ವತಂತ್ರ ವಿನ್ಯಾಸದಲ್ಲಿ ಇದೆ.

ಈವತ್ತು ಗಾಂಧಿಯ ಹಾಗೆ ಹಿಂದೂಗಳನ್ನು ಸಮರ್ಥಿಸಿಕೊಳ್ಳಬಲ್ಲ ಒಬ್ಬ ನಾಯಕನೂ ಹಿಂದೂಗಳಿಗೆ ಇಲ್ಲ. ಇದು ಹಿಂದೂಗಳಿಗಿರುವ ನಷ್ಟ. ಹಿಂದೂಗಳಲ್ಲದವರನ್ನು ಗಾಂಧಿಯ ಹಾಗೆ ಪ್ರೀತಿಸಬಲ್ಲವನೂ ಇಲ್ಲ. ಇದು ಹಿಂದೂಗಳಲ್ಲದವರಿಗಿರುವ ನಷ್ಟ. ಅದಕ್ಕೇ ಹಮೀದ್ ದಲವಾಯಿ ಅವರು, "ಹಿಂದೂಗಳಿಗೆ ತಾವು ಮರೆತಿದ್ದೇವೆ ಎಂದು ಹೇಳಲಿಕ್ಕಾದರೂ ಒಬ್ಬ ಗಾಂಧಿ ಇದ್ದಾರೆ. ನಮಗೆ ಗಾಂಧಿಯಂತಹವರು ಒಬ್ಬನೂ ಇಲ್ಲ" ಎಂದು ಹೇಳಿದ್ದುದು. ಪ್ರಾಯಶಃ ಹಿಂದೂಗಳು ಗಾಂಧಿಯಲ್ಲಿ ಹಿಂದುತ್ವವನ್ನು ಕಾಣಲು ತೊಡಗಿದರೆ ಭಾರತವನ್ನು ವಿಶ್ವಗುರುವಾಗಿ ಮಾಡಬೇಕಾದ್ದಿಲ್ಲ; ಅದು ತಾನೇ ತಾನಾಗಿ ಆಗುತ್ತದೆ.

ಗಾಂಧಿಯವರ 150ನೇ ಜನ್ಮ ವರ್ಷದ ನೆನಪಿಗಾಗಿ ಈ ಕೃತಿಯನ್ನು ಪ್ರಕಟಿಸಿರುವುದಾಗಿ ಪ್ರಕಾಶಕರು ಹೇಳಿದ್ದಾರೆ. ಬೊಗಸೆಯಲ್ಲಿ ಹಿಡಿಯಬಹುದಾದಷ್ಟು ಸಮುದ್ರದ ಜಲವನ್ನು ಹಿಡಿಯುವಂತೆ ಗಾಂಧಿಯವರ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳನ್ನು ಬರೆದಿರುವುದಾಗಿ ಲೇಖಕರು ಹೇಳಿಕೊಂಡಿದ್ದಾರೆ. ಆದರೆ ಇದು ಕನ್ನಡಕ್ಕೆ ಮಹತ್ಕೃತಿಗಳಲ್ಲಿ ಒಂದಾಗಿದೆ. ಈ ಸತ್ಕಾರ್ಯವನ್ನು ಕೈಗೊಂಡದ್ದಕ್ಕಾಗಿ ರಾಷ್ಟ್ರೋತ್ಥಾನ ಸಾಹಿತ್ಯದವರಿಗೂ, ಮ.ಗ. ಶೆಟ್ಟಿಯವರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸಿ ಈ ಕೃತಿಯು ಲಕ್ಷಗಳ ಸಂಖ್ಯೆಯಲ್ಲಿ ಜನರನ್ನು ತಲುಪಲಿ ಎಂದು ಪ್ರಕಾಶಕರಿಗೂ; 160 ಪುಟಗಳ 140 ರೂಪಾಯಿ ಮುಖಬೆಲೆಯ ಕೃತಿಯನ್ನು ಖರೀದಿಸಲು ಕಷ್ಟವಾಗದಿರಲಿ ಎಂದು ಓದುಗರಿಗೂ ಹಾರೈಸುತ್ತೇನೆ.



# ಸೃಷ್ಟಿಯ ಶಾಶ್ವತ ನಿಯಮಗಳನ್ನು ಗೌರವಿಸುವುದೇ ಸ್ವದೇಶೀ

ಎಸ್.ಆರ್. ರಾಮಸ್ವಾಮಿ

ಸ್ವದೇಶೀ, ಪರಿಸರಸ್ವಾಸ್ಥ್ಯ, ಸರಳಜೀವನ – ಈ ವಿಷಯಗಳ ಬಗೆಗೆ ಐವತ್ತರವತ್ತು ವರ್ಷದಿಂದ ಮಾತನಾಡಿದ್ದೇನೆ, ಬರೆದಿದ್ದೇನೆ. ಈಗಲೂ ಇವುಗಳ ಬಗೆಗೆ ನಾಲ್ಕು ಮಾತುಗಳನ್ನಾಡಬೇಕೆಂದು ಸೂಚಿಸಿದ್ದಾರೆ, ಇರಲಿ. ಈ ಅವಧಿಯಲ್ಲಿ ನಾನು ಸ್ವದೇಶೀ, ಪರಿಸರ – ಇವುಗಳನ್ನು ಕುರಿತ ನಮ್ಮ ಚಿಂತನೆಯ ಹಿನ್ನೆಲೆಯ ತಾತ್ತ್ವಿಕತೆ ಏನು ಎಂದು ಸಂಕ್ಷಿಪ್ತವಾಗಿ ತಿಳಿಸಲು ಯತ್ನಿಸುತ್ತೇನೆ. ಆ ದರ್ಶನವನ್ನು ಗ್ರಹಿಸಿದರೆ ನಿಮ್ಮ ನಿಮ್ಮ ಚಿಂತನೆಯನ್ನು ನೀವೇ ರೂಪಿಸಿಕೊಳ್ಳಬಹುದು. ನಾನು 'ಇದು ಸ್ವದೇಶೀ', 'ಇದು ಸ್ವದೇಶೀ ಅಲ್ಲ' ಎಂದು ಪಟ್ಟಿಮಾಡುವುದು ಪ್ರಯೋಜನಕರವಾಗುವುದಿಲ್ಲ. ನಿನ್ನೆ 'ಸ್ವದೇಶೀ ಕಂಪೆನಿ', 'ಸ್ವದೇಶೀ ಸರಕು' ಎಂದು ಇದ್ದದ್ದು ಇವತ್ತು ವಿದೇಶೀ ಆಗಿಬಿಟ್ಟಿರುತ್ತದೆ. 1992–93ರ ಪಟ್ಟಿ ಕೆಲವೇ ವರ್ಷಗಳಲ್ಲಿ ವ್ಯತ್ಯಾಸವಾಯಿತು. ಆದ್ದರಿಂದ ನಾನು ಹೇಳಲು ಬಯಸುವುದು – ಸ್ವದೇಶೀ ಎಂಬುದು ಒಂದು ಜೀವನದೃಷ್ಟಿ ಎಂಬುದನ್ನು. ಅದು ಒಂದಷ್ಟು ಮನಸ್ಸಿನೊಳಕ್ಕೆ ಇಳಿದರೆ, ಬೇರೆ ಬೇರೆ ಸನ್ನಿವೇಶಗಳಲ್ಲಿ ಯಾವುದು ಆರೋಗ್ಯಕರ ವರ್ತನೆ ಎನ್ನುವುದು ಸಹಜವಾಗಿ ಅರ್ಥವಾಗುವುದು. ಹಿಂದಿನ ಸ್ವದೇಶೀ ಚಳವಳಿಗಳಲ್ಲಿ ಅಲ್ಪಪ್ರಮಾಣದ ಯಶಸ್ಸಷ್ಟೇ ಸಿಕ್ಕಿದುದಕ್ಕೆ ಕಾರಣ ಅವುಗಳ ಪ್ರವರ್ತಕರು ಬಾಹ್ಯಜೀವನದ ಮಟ್ಟದಲ್ಲಿ 'Do's and don'ts' ಪ್ರಚಾರ ಮಾಡಿದುದು – ಚರಕಾದಲ್ಲಿ ನೂತದ್ದು ಸ್ವದೇಶೀ, ಹಳ್ಳಿಮೂಲೆಯಲ್ಲಿ ತಯಾರಾದದ್ದು ಸ್ವದೇಶೀ – ಎಂಬ ರೀತಿಯಲ್ಲಿ. ಅವೆಲ್ಲ ಉಪಯುಕ್ತವೇ. ಆದರೆ ಪರಿಮಿತ ಪ್ರಯೋಜನಕರವಾದವು. ಕಾರಣವೆಂದರೆ – ಯಾವುದೇ ಅಭಿಯಾನದಲ್ಲಿ ಹೆಚ್ಚಿನ ಸಫಲತೆ ಸಿಗಬೇಕಾದರೆ ಅದರ ತಾತ್ತ್ವಿಕ ಹಿನ್ನೆಲೆ ಮನಸ್ಸಿನೊಳಕ್ಕೆ, Sub-conscious ಸ್ತರಕ್ಕೆ ಇಳಿಯುವುದು ಅವಶ್ಯ. ಅದರ ತಾತ್ತ್ವಿಕ ನೆಲೆಗಟ್ಟು ಜನರ ಅಂತರಂಗಕ್ಕೆ ಬೋಧವಾಗಬೇಕು. ಅದು ಆಗದಿದ್ದರೆ ಎಷ್ಟೇ ಸೂತ್ರರೂಪದ ಪ್ರಚಾರ ಮಾಡಿದರೂ ಪ್ರಯೋಜನ ಪರಿಮಿತವೇ ಆಗಿರುತ್ತದೆ.

ಸ್ವದೇಶೀ, ಪರಿಸರ ಸ್ವಾಸ್ಥ್ಯ, ಸರಳಜೀವನ ಮೊದಲಾದ ವಿಷಯಗಳು – ವಾಸ್ತವವಾಗಿ ಇವೆಲ್ಲ ಬೇರೆಬೇರೆ ಪ್ರತ್ಯೇಕ ವಿಷಯಗಳೇನಲ್ಲ. ವಿಶ್ಲೇಷಣೆಯ ಸೌಲಭ್ಯಕ್ಕೋಸ್ಕರ ಅವನ್ನು ಬೇರೆಬೇರೆಯಾಗಿ ಪರಿಶೀಲಿಸುತ್ತೇವಷ್ಟೆ. ಇವೆಲ್ಲದರ ಬುಡದಲ್ಲಿರುವ ಸಮಸ್ಯೆ ಒಂದೇ.

ಹಲವು ಕಾರಣಗಳಿಂದ ಮನುಷ್ಯ ಪ್ರಕೃತಿಯೊಡನೆ ತನಗಿದ್ದ ನಂಟನ್ನು ಕಳಚಿಕೊಂಡಿದ್ದಾನೆ. ಆ ಕೊಂಡಿಯನ್ನು ಮರಳಿ ಸ್ಥಾಪಿಸುವುದು ಹೇಗೆ ಎಂಬುದೇ ಇಂದಿನ ಪ್ರಮುಖ ಸವಾಲಾಗಿದೆ. ಪ್ರಕೃತಿಯಿಂದ ದೂರಸರಿದು ನಾವು ತಪ್ಪು ಮಾಡಿದ್ದೇವೆಂಬ ಅರಿವು ಇಂದು ಎಲ್ಲರಲ್ಲಿಯೂ ಮೂಡಿದೆ. ಆದರೆ ಆ ಅಂತರವನ್ನು ಕಡಮೆ ಮಾಡುವ ಧೃತಿಯೂ ಸ್ಥೈರ್ಯವೂ ಇಲ್ಲವಾಗಿದೆ.

ಹಿಂದೆ ತನ್ನ ಅಗತ್ಯಗಳೇನೆಂಬ ಬಗ್ಗೆ ಮನುಷ್ಯನಿಗೆ ಸ್ಪಷ್ಟ ಕಲ್ಪನೆ ಇತ್ತು. ಇಂದಾದರೋ ಮನುಷ್ಯನ ಅಗತ್ಯಗಳೇನೆಂಬುದನ್ನು ಹೊರಗಿನ ಶಕ್ತಿಗಳೂ ಪ್ರಭಾವಗಳೂ ನಿರ್ಣಯಿಸುತ್ತಿವೆ. ಅಷ್ಟೇ ಅಲ್ಲ, ಸುಖದ ಕಲ್ಪನೆ ಕೂಡ ವ್ಯತ್ಯಾಸವಾಗಿದೆ. ಯಾವ ಪ್ರಮಾಣದಲ್ಲಿ ಏನೇನೋ ಉತ್ಪನ್ನಗಳನ್ನು ಬಳಸುತ್ತಿದ್ದೇವೆಂಬುದೇ ಸುಖದ ಮಾನದಂಡವೆನಿಸಿದೆ. ಈ ಪ್ರವೃತ್ತಿಯಿಂದಾಗಿ ಮಾನಸಿಕ ಮತ್ತು ಬೌದ್ಧಿಕ ಶಿಥಿಲತೆಯೂ ಉಂಟಾಗಿದೆ.

ನಮ್ಮ ಸುತ್ತಲಿನ ಪರಿಸರವನ್ನು ನಮ್ಮ ಭೋಗದ ಸಾಧನವೆಂದು ಪರಿಗಣಿಸುತ್ತಿರುವುದೂ ಆ ಆಂತರಿಕ ಶಿಥಿಲತೆಯ ಸೂಚಕ. ಇದಕ್ಕೆ ಪರಿಹಾರವೆಂದರೆ – ನಷ್ಟವಾಗಿರುವ ಸಹಜ ದೃಷ್ಟಿಯನ್ನು ಮರಳಿ ಪಡೆಯುವುದು. ಪ್ರಕೃತಿಯನ್ನು ಗೌರವಿಸುವುದು ಎಂದರೆ ವಿಶ್ವಸೃಷ್ಟಿಯ ಶಾಶ್ವತ ನಿಯಮಗಳನ್ನು ಗೌರವಿಸುವುದು – ಎಂಬ ತಿಳುವಳಿಕೆಯನ್ನು ನಾವು ರೂಢಿಸಿಕೊಳ್ಳಬೇಕಾಗಿದೆ. ವಿಜ್ಞಾನ–ತಂತ್ರಜ್ಞಾನಗಳ ಆವೇಶದ ಉರುಬಿನಲ್ಲಿ ಈ ಮೂಲತತ್ತ್ವ ಮಸಕಾಗಿದೆ. ಸೃಷ್ಟಿಯನ್ನು ಸಮಗ್ರವಾಗಿ ನೋಡುವುದಕ್ಕೆ ಬದಲಾಗಿ ಆಂಶಿಕವಾಗಿ ಚೂರುಚೂರಾಗಿ ನೋಡತೊಡಗಿದ್ದೇವೆ. ಈ ಅಸಮಗ್ರತೆ ಜೀವನದ ಎಲ್ಲ ಸ್ತರಗಳಲ್ಲಿಯೂ ಹಬ್ಬಿದೆ. ಒಂದೊಂದು ಚಟುವಟಿಕೆಯನ್ನೂ ಅದೇ ಪ್ರತ್ಯೇಕವೆಂಬಂತೆ ಪರಿಗಣಿಸುತ್ತಿದ್ದೇವೆ. ಪಾರಂಪರಿಕ ಜೀವನದೃಷ್ಟಿ ಇದರಿಂದ ಭಿನ್ನವಾದದ್ದು. ಒಂದೊಂದು ಕ್ರಿಯೆಯನ್ನೂ ಅದರ ವೈಶ್ವಿಕ ಹಿನ್ನೆಲೆಯಲ್ಲಿಯೇ ಅರ್ಥೈಸುವುದು ಪಾರಂಪರಿಕ ಚಿಂತನಕ್ರಮ.

ನೈಜ ಅಗತ್ಯಗಳ ಸ್ಥಾನವನ್ನು ಲಾಲಸೆ ಆಕ್ರಮಿಸಿದ್ದೇ ಇಂದಿನ ವಿಕೃತಿಗಳ ಮೂಲ. ಅದು ಎಷ್ಟು ದೂರ ಮುಂದುವರಿದಿದೆಯೆಂದರೆ – ಈಗ ನಾಗರಿಕತೆಗೇ, ಮನುಷ್ಯನ ಅಸ್ತಿತ್ವಕ್ಕೇ ಸವಾಲಾಗಿದೆ.

ಈ ಅಂಶವನ್ನು ನಾವಿಲ್ಲಿ ಒತ್ತಿ ಹೇಳಲು ಇನ್ನೊಂದು ಪ್ರಬಲ ಕಾರಣ ಇದೆ: ಇಂದು ಪರಿಸರಸ್ವಾಸ್ಥ್ಯದ ಪರವಾಗಿ ದನಿಯೆಬ್ಬಿಸುವವರಲ್ಲಿಯೂ ಹೆಚ್ಚು ಮಂದಿ 'ಜಗತ್ತು ಇರುವುದೇ ನಮ್ಮ ಬಳಕೆಗಾಗಿ' ಎಂಬ ವಿಕೃತ ದೃಷ್ಟಿಯಿಂದ ಮುಕ್ತರಾಗಿಲ್ಲ. ಪ್ರಕೃತಿಧ್ವಂಸದಿಂದ ವ್ಯಕ್ತಿಸುಖಕ್ಕೆ ಬಾಧೆಯೊದಗುತ್ತದೆಂಬುದೇ ಅವರ ಚಿಂತೆಗೆ ಪ್ರೇರಣೆ ಒದಗಿಸಿದೆ; ಪ್ರಾಕೃತಿಕ ಸಂಪನ್ಮೂಲಗಳ ಶೋಷಣೆಯಿಂದ ಉತ್ಪಾದನೆಗೆ ಧಕ್ಕೆ ತಗಲುತ್ತದೆ, ನೀರಿನ ಮಾಲಿನ್ಯದಿಂದ ಕಾಯಿಲೆಗಳು ಹರಡುತ್ತವೆ, ರಾಸಾಯನಿಕಗಳಿಂದ ಭೂಮಿಯ ಉತ್ಪಾದಕತೆ ನಾಶವಾಗುತ್ತದೆ, ಅರಣ್ಯನಾಶದಿಂದ ಬರ ಉಂಟಾಗುತ್ತದೆ, ಭೂಮಿಯ ತಾಪಮಾನ ಹೆಚ್ಚಾಗುತ್ತದೆ, ಓಜೋನ್ ವಲಯದಲ್ಲಿ ರಂಧ್ರಗಳೇರ್ಪಡುತ್ತವೆ, ಇತ್ಯಾದಿ. ಈ ಸಂಗತಿಗಳೆಲ್ಲ ನಿಜವೇ. ಆದರೆ ಈ ಬೇರೆ ಬೇರೆ ಸಮಸ್ಯೆಗಳೆಲ್ಲದರ ಮೂಲದಲ್ಲಿರುವ ಪ್ರಮುಖ ಸಮಸ್ಯೆ ಜೀವನದೃಷ್ಟಿಯದು. ಆ ಮೂಲಸಮಸ್ಯೆಗೆ ಪರಿಹಾರ ಕಂಡುಕೊಂಡ ಹೊರತು ಈ ಯಾವುದೇ ಪ್ರತ್ಯೇಕ ಸಮಸ್ಯೆ ನೀಗುವ ಸಾಧ್ಯತೆಯಿಲ್ಲ.

ಈ ಸಮಸ್ಯೆಗಳನ್ನು ಬೇರೆ ಬೇರೆ ಸಮಸ್ಯೆಗಳೆಂದು ನೋಡುವುದೂ ಇಂದಿನ ಮನೋವಿಕೃತಿಯ ದ್ಯೋತಕವೇ. ಪ್ರಕೃತಿಯೆಂದರೆ ನೆಲ ನೀರು ಕಾಡು ಬೆಟ್ಟಗಳ ಒಟ್ಟಿಲು ಮಾತ್ರವಲ್ಲ. ಈ ಎಲ್ಲದರ ನಡುವಣ ಜಟಿಲ ಸಂಬಂಧಗಳಿಗೇ ಪರಿಸರ ಅಥವಾ ಪ್ರಕೃತಿ ಎಂಬ ಹೆಸರು ಸಲ್ಲುವುದು. ಭೂಮಿಯ ಪದರಗಳಲ್ಲಿ ನಿಬಿಡವಾಗಿರುವ ಸೂಕ್ಷ್ಮಜೀವಿಗಳ ಕ್ರಿಯೆಯನ್ನೂ ಜಟಿಲ ಅಂತಸ್ಸಂಬಂಧಗಳನ್ನೂ ಸಮಗ್ರವಾಗಿ ಅರಿತುಕೊಳ್ಳಲು ವಿಜ್ಞಾನಕ್ಕೆ ಎಂದಾದರೂ ಸಾಧ್ಯವಾದೀತೆಂಬ ಊಹೆಗೇ ಆಧಾರವಿಲ್ಲ.

ಈ ದಿಕ್ಕಿನಲ್ಲಿ ಯೋಚಿಸುವಾಗ ಹೊರಪಡುವ ಸಂಗತಿ – ಇಂದಿನ ಮುಖ್ಯ ಸಂಘರ್ಷವಿರುವುದು ಎರಡು ಭಿನ್ನ ಜೀವನದೃಷ್ಟಿಗಳ ನಡುವೆ ಎಂಬುದು: ಒಂದು ದೃಷ್ಟಿ 'ಪ್ರಕೃತಿಯೊಡನೆ ಸಾಮರಸ್ಯದಿಂದ ಬಾಳುವುದರಲ್ಲಿಯೇ ನಮ್ಮ ಹಿತವಿದೆ' ಎಂಬುದು; ಇನ್ನೊಂದು ದೃಷ್ಟಿ 'ಪ್ರಕೃತಿಯ ಮೇಲೆ ಹೆಚ್ಚು ಹೆಚ್ಚು ಪ್ರಭುತ್ವ ಸ್ಥಾಪಿಸುತ್ತ ಹೋಗೋಣ' ಎಂಬುದು.

ನಮ್ಮ ಜೀವನಕ್ಕೆ ಒಂದು ಸಹಜ ಲಯ ಇರುತ್ತದೆ. ನಮ್ಮ ಹೊರಗಿನ ಚಟುವಟಿಕೆಗಳು ಆ ಸಹಜ ಲಯಕ್ಕೆ ಹೊಂದುವಂತೆ ಇರಬೇಕಾಗುತ್ತದೆ. ಇದು ಒಂದು ನಿಸರ್ಗನಿಯಮ. ನಮ್ಮ ಸಹಜ ಜೀವನ ಲಯವನ್ನು ಗಣನೆಗೆ ತೆಗೆದುಕೊಳ್ಳದೆ ಹೊರಗಿನ ಚಟುವಟಿಕೆಗಳನ್ನೂ ವೇಗವನ್ನೂ ಹೆಚ್ಚಿಸುತ್ತ ಹೋದರೆ ಧಾವಂತವಾಗುತ್ತದೆ, ಅಶಾಂತಿ ಉಂಟಾಗುತ್ತದೆ. ನಮ್ಮ ಸಹಜ ಲಯದ ವೇಗದಲ್ಲಿ ನಾವು ಚಲಿಸುತ್ತಿದ್ದರೆ ನಿಸರ್ಗದೊಡನೆ ಇತರರೊಡನೆ ಮತ್ತು ಜೀವರಾಶಿಗಳೊಡನೆ ನಮ್ಮ ಸಂಬಂಧ ಸಾಮರಸ್ಯದ್ದು ಆಗಿರುತ್ತದೆ. ಬಾಹ್ಯಜೀವನದ ವೇಗವು ಮಿತಿಮೀರಿದಾಗ ಈ ಸಾಮರಸ್ಯಕ್ಕೆ ಬಾಧೆಯೊದಗುತ್ತದೆ, ವಿರಸ ಉಂಟಾಗುತ್ತದೆ.

ನೆಮ್ಮದಿ ಮತ್ತು ನಿಧಾನಗತಿಗಳು ಕೂಡ ಜೀವನದ ಅನಿವಾರ್ಯ ಅಂಗಗಳೇ. ಜೀವನದ ತೀವ್ರಗತಿ ಪಾಶ್ಚಾತ್ಯ ದೇಶಗಳವರಿಗೆ ಸಹಜವಾಗಿರಬಹುದು. ನಮಗೆ ಹಾಗಿಲ್ಲ.

ಸ್ವದೇಶೀ ಕುರಿತಂತೆ ನಾವು ಮೊಟ್ಟಮೊದಲು ಗ್ರಹಿಸಬೇಕಾದ ಸಂಗತಿ ಎಂದರೆ – ಅದೊಂದು ವ್ಯಾಪಕ ಜೀವನದೃಷ್ಟಿಯೇ ಹೊರತು ಯಾವುದೋ ಕೆಲವು ಸೂತ್ರೀಕರಣಗಳ ಸಮೂಹವಲ್ಲವೆಂಬುದು.

ಭಾರತೀಯರಾದ ನಾವು ನಮ್ಮ ಪರಂಪರೆಗೂ ಸ್ವಭಾವಕ್ಕೂ ಅನುಗುಣವಾದ ವ್ಯವಸ್ಥೆಗಳನ್ನು ಯೋಜಿಸಿದರೆ ಮಾತ್ರ ಏಳ್ಗೆ ಹೊಂದಲಾಗುತ್ತದೆ. ಇದು ಇತಿಹಾಸಸಿದ್ಧವಾಗಿರುವ ಪಾಠ. ಇರುವ ಸಂಪನ್ಮೂಲಗಳನ್ನು ದಕ್ಷವಾಗಿ ಬಳಸುವುದು, ಪ್ರತಿಯೊಬ್ಬ ವ್ಯಕ್ತಿ ತನಗೆ ಅಗತ್ಯವಾದಷ್ಟನ್ನು ಮಾತ್ರ ಬಳಸುವುದು – ಈ ದಿಕ್ಕಿನದು ಸ್ವದೇಶೀ ಚಿಂತನೆ.

ತನ್ನ ಅಗತ್ಯಕ್ಕೆ ಮೀರಿ ಬಳಸುವುದನ್ನು 'ಕಳ್ಳತನ' ಎಂದೇ ನಮ್ಮ ಪರಂಪರೆ ಕರೆದಿದೆ. ಜನಗಳಲ್ಲಿ "ನನಗೆ ಇದು ಬೇಕು, ಇನ್ನೊಂದು ಬೇಕು, ಮತ್ತೊಂದು ಬೇಕು ಎಂಬ ಅಪರಿಮಿತ ಆಕಾಂಕ್ಷೆಗಳನ್ನು ಪಾಶ್ಚಾತ್ತ್ಯ ನಾಗರಿಕತೆ ಸೃಷ್ಟಿಮಾಡಿದೆ. ಹೀಗೆ ಬಗೆಬಗೆಯ ಅನಗತ್ಯ ಆಕಾಂಕ್ಷೆಗಳಿಗೆ ನಾವು ದಾಸರಾಗಿಬಿಟ್ಟಿದ್ದೇವೆ. ಇದು ಮಾನಸಿಕ ಗುಲಾಮಿತನ. ಒಂದು ಪದಾರ್ಥ ಬೇಕು ಎಂಬ ಆತುರ ಉಂಟಾದರೆ ಅದನ್ನು ಹೇಗಾದರೂ ಪಡೆಯುವುದಕ್ಕಾಗಿ ಶಕ್ತಿಮೀರಿ ಪ್ರಯಾಸ ನಡೆಸುತ್ತೇವೆ. ಮಿತಿಮೀರಿದ ಬಯಕೆ ನಮ್ಮನ್ನು ದೀನರನ್ನಾಗಿ ಮಾಡಿಬಿಡುತ್ತದೆ. ಬೇಕಾದ್ದು ದೊರೆತ ಮೇಲೂ ಸುಖ ದೂರವೇ ಉಳಿಯುತ್ತದೆ.

ನಮ್ಮ ಚಿಂತನೆ ಆರಂಭವಾಗಬೇಕಾದ್ದು – 'ನಾನು ಏನೇನು ಶೇಖರಿಸಲಿ?' ಎಂಬುದರಿಂದಲ್ಲ; ಪ್ರತಿಯಾಗಿ 'ನನಗೆ ಏನು ಬೇಕು, ಎಷ್ಟು ಬೇಕು?' ಎಂಬುದರಿಂದ.

ಹಾಗೆ ಮಾಡದಿದ್ದರೆ, ಗಾಳಿ ಬೀಸಿದ ಕಡೆಗೆ ನಮ್ಮ ಜೀವನ ತರಗೆಲೆಯಂತೆ ಅಲೆಯುತ್ತಾ ಹೋಗುತ್ತದೆ.

**ಕಪಿಲ್‌ದೇವ್ ಅಥವಾ ಏಕ್–ದೋ–ತೀನ್** ಮಾಧುರಿ ದೀಕ್ಷಿತ್ ದೂರದರ್ಶನದಲ್ಲಿ ಹೇಳಿದ ಮಾತ್ರಕ್ಕೆ ನಾವು ಸೋಪನ್ನೋ ಬೂಸ್ಟನ್ನೋ ಏಕೆ ಕೊಂಡುಕೊಳ್ಳಬೇಕು? ಅವುಗಳ ಗುಣಗಳನ್ನು ಶಿಫಾರಸು ಮಾಡುವುದಕ್ಕೆ ಮಾಧುರಿ ದೀಕ್ಷಿತ್ ಆಗಲಿ ಕಪಿಲ್‌ದೇವ್ ಆಗಲಿ ಕೆಮಿಕಲ್ ಇಂಜಿನಿಯರುಗಳೇನಲ್ಲವಲ್ಲ!

ನಮಗೆ ಸ್ವ–ನಿಯಂತ್ರಣ ಮತ್ತು ವಿವೇಕಪ್ರಜ್ಞೆ ಇರಬೇಕಾದದ್ದು ಜೀವನದ ಸುವ್ಯವಸ್ಥೆಯ ದೃಷ್ಟಿಯಿಂದಲೇ ಅನಿವಾರ್ಯವಾಗಿದೆ. ನೆಪೋಲಿಯನ್ ಒಮ್ಮೆ ಹೇಳಿದ್ದ 'The only conquest which are permanent and leave

# ಆತ್ಮನಿರ್ಭರ ಭಾರತ

no regrets, are our conquests over ourselves' – ಎಂದು.

ಬೇರೆ ದೇಶಗಳವರು ಅವರ ದೃಷ್ಟಿಯ ಸ್ವದೇಶೀ ಆಚರಣೆಗಳನ್ನು ನಿರ್ಭಿಡೆಯಾಗಿ ನಡೆಸುತ್ತಾರೆ. ಅಮೆರಿಕದ ಹಲವಾರು ಪ್ರಾಂತಗಳಲ್ಲಿ 'buy local' ಶಾಸನಗಳಿವೆ. ಆ ಪ್ರಾಂತಗಳಲ್ಲೆಲ್ಲ ಕಟ್ಟಡಕೆಲಸಗಳಿಗೆ ಸ್ಥಳೀಯವಾಗಿ ಅಮೆರಿಕದೊಳಗಡೆ ಉತ್ಪಾದನೆಯಾದ ಉಕ್ಕನ್ನೇ ಬಳಸಬೇಕೆಂಬ ಕಡ್ಡಾಯ ನಿಯಮವಿದೆ.

ನಾವು ಮಾತ್ರ ಪಾಶ್ಚಾತ್ಯ ದೇಶಗಳ ಎಲ್ಲ ದಬಾವಣೆಗಳಿಗೂ ಹೂಂಗುಟ್ಟುತ್ತಿದ್ದೇವೆ. ಸ್ವಾಭಿಮಾನವನ್ನು ಉಳಿಸಿಕೊಂಡ ದೇಶ ಮಾತ್ರ ಈ ಜಗತ್ತಿನಲ್ಲಿ ತೇರ್ಗಡೆಯಾಗಬಲ್ಲದು.

ಜರ್ಮನಿಯ ಕ್ರುಪ್ ಎಸ್ಟಾಟ್ ಕಾರ್ಖಾನೆ ಜಗತ್ಪ್ರಸಿದ್ಧವಾದ್ದು. ಹಿಂದೆ ಅದು ತೋಪು, ಯುದ್ಧ ಸಾಮಗ್ರಿಗಳ ತಯಾರಿಕೆಯಲ್ಲಿ ಅಗ್ರಪಂಕ್ತಿಯಲ್ಲಿತ್ತು. ಆ ಸಂಸ್ಥೆಯ ಸ್ಥಾಪಕ ಫ್ರೆಡರಿಕ್ ಕ್ರುಪ್‌ನ ಮಗ ಆಲ್‌ಫ್ರೆಡ್ ಕ್ರುಪ್. ಇವನು 1855ರಲ್ಲಿ ಮೊಟ್ಟಮೊದಲಿಗೆ ತಾನು ತಯಾರಿಸಿದ ಯುದ್ಧತೋಪುಗಳ ಪ್ರದರ್ಶನ ನಡೆಸಿದಾಗ ಯೂರೋಪಿನ ತಂತ್ರಜ್ಞಾನಿಗಳೆಲ್ಲ ಬೆರಗಾಗಿದ್ದರು. ಅಂಥ ತೋಪುಗಳಿಗೆ ಇಡೀ ಯೂರೋಪಿನಲ್ಲಿ ಅಪಾರ ಬೇಡಿಕೆ ಇದ್ದಿತು. ಅದಕ್ಕಾಗಿ ಮೊದಮೊದಲು ಬೇಡಿಕೆ ಕಳಿಸಿದವನು, ಮೂರನೇ ನೆಪೋಲಿಯನ್.

ಆಲ್‌ಫ್ರೆಡ್ ಆ ದಿನಗಳಲ್ಲಿ ತುಂಬಾ ಹಣದ ಮುಗ್ಗಟ್ಟಿನಲ್ಲಿದ್ದ. ಆಗ ಫ್ರಾನ್ಸ್–ಜರ್ಮನಿಗಳ ಪರಸ್ಪರ ಸಂಬಂಧ ಚೆನ್ನಾಗಿರಲಿಲ್ಲ. ಆಲ್‌ಫ್ರೆಡ್ ಯಾವುದೇ ಆರ್ಡರನ್ನು ನಿರಾಕರಿಸುವ ಸ್ಥಿತಿಯಲ್ಲಿ ಇರಲಿಲ್ಲ. ಆದರೆ ಅವನಿಗೆ ತಾನು ಮಾರುವ ತೋಪುಗಳು ತನ್ನ ದೇಶದ ಮೇಲೆಯೇ ಪ್ರಯೋಗವಾಗಬಹುದೆಂಬ ಅನುಮಾನ ಬಂದಿತು. ಆದ್ದರಿಂದ ಅವನು ಕೂಡಲೇ ಫ್ರಾನ್ಸಿನ ದೊರೆಗೆ ಪತ್ರ ಬರೆದ: 'ನಾನೊಬ್ಬ ವ್ಯಾಪಾರಿ ಎಂಬುದೇನೋ ನಿಜ. ಆದರೆ ಅದಕ್ಕೂ ಮೊದಲು ನಾನೊಬ್ಬ ಜರ್ಮನ್. ಆದ್ದರಿಂದ ನಿಮ್ಮ ಬೇಡಿಕೆಯನ್ನು ನಾನು ಪೂರೈಸಲಾರೆ, ಕ್ಷಮಿಸಿ' ಅಂತ.

ಸ್ವದೇಶೀ ದೃಷ್ಟಿ ಇದ್ದವರು ಯೋಚಿಸಬೇಕಾದ್ದು ಹೀಗೆ.

ಅಮೆರಿಕದ ಕಂಪೆನಿಯೊಂದು ಈಗ್ಗೆ ಐವತ್ತು ವರ್ಷ ಹಿಂದೆ ಜಪಾನಿನಲ್ಲಿ ತನ್ನ ಕಾರ್ಯ ಪ್ರಾರಂಭಿಸಿತ್ತು. ಆ ಕಾರ್ಯಾಲಯದಲ್ಲಿ ಕೆಲಸಕ್ಕಾಗಿ ಜಪಾನೀಯರನ್ನೇ ನೇಮಿಸಿಕೊಂಡಿತ್ತು. ಅಮೆರಿಕದಲ್ಲಿ ಸಾಮಾನ್ಯವಾಗಿ ವಾರದಲ್ಲಿ ಐದೇ ದಿವಸ ಕೆಲಸ ಮಾಡುವ ರೂಢಿ ಇದೆ – ಅನ್ನೋದು ನಿಮಗೆಲ್ಲ ಗೊತ್ತು. ಅಮೆರಿಕನ್ ಕಂಪೆನಿ ಜಪಾನಿನಲ್ಲೂ ಇದೇ ನಿಯಮ ಜಾರಿ ಮಾಡಲು ಬಯಸಿತು. ಆದರೆ ಇದಕ್ಕೆ ಜಪಾನೀ ಕಾರ್ಮಿಕರು ವಿರೋಧ ಮಾಡಿದರು: 'ನಮಗೆ ವಾರದಲ್ಲಿ ಒಂದೇ ದಿನ ರಜೆ ಸಾಕು. ಹೆಚ್ಚು ರಜೆ ಕೊಟ್ಟರೆ ನಾವು ಸೋಮಾರಿಗಳಾಗಬಹುದು. ಇದಕ್ಕಿಂತ ಹೆಚ್ಚಿನ ಹಾನಿಯೆಂದರೆ ರಜೆಯಲ್ಲಿ ನಮಗೆ ವಿಲಾಸಿ ಜೀವನ ಅಭ್ಯಾಸವಾಗಿ ಬಿಡಬಹುದು. ಹೀಗೆ ಖರ್ಚು ಹೆಚ್ಚಬಹುದು. ನಮ್ಮನ್ನು ಆಲಸಿಗಳನ್ನಾಗಿ ಮಾಡುವ ಮತ್ತು ನಮ್ಮ ಖರ್ಚನ್ನು ಅನಾವಶ್ಯಕ ಹೆಚ್ಚಿಸುವ ರಜೆ ನಮಗೆ ಬೇಡ.' ಜನರಲ್ಲಿ ಈ ದೃಷ್ಟಿ ಇದ್ದದ್ದರಿಂದಲೇ ಜಪಾನ್ ದೇಶ ಏಳ್ಗೆಯಾದದ್ದು. ಇಂಥ ಮನೋಧರ್ಮವೇ ಸ್ವದೇಶೀಪ್ರಸ್ಥಾನದ ಹೃದಯ.

ನಾವು ಯಾವುದೇ ವೃತ್ತಿಯಲ್ಲಿರಲಿ – ರೈತ, ಕಮ್ಮಾರ, ಬಡಗಿ, ಮೋಚಿ, ಏನೇ ಅಗಿರಲಿ – ಪ್ರಾಮಾಣಿಕ ಕಾಯಕ ನಡೆಸಲೇಬೇಕು. ಆದರೆ ಇದರಿಂದ ದೊರೆಯುವ ಸಮಾಧಾನ ಮತ್ತು ಆನಂದದ ಮೂಲ ಇರುವುದು ಆ ಗಳಿಕೆಯಲ್ಲಿ ಮಾತ್ರ ಅಲ್ಲ, ಅದರಲ್ಲಿ ಸಂಗತವಾಗುವ ಮಾನವಸಂಬಂಧ ವರ್ಧನೆಯಲ್ಲಿ. ಆನಂದ ಉಂಟಾಗುವುದು ಜೀವನವನ್ನು ಹಂಚಿಕೊಳ್ಳುವುದರಿಂದಲೇ ಹೊರತು ರೂಪಾಯಿಗಳ ಮತ್ತು ವಸ್ತುಗಳ ಶೇಖರಣೆಯಿಂದ ಅಲ್ಲ.

ಇದು ಸ್ವದೇಶೀ ದರ್ಶನ: ನಿಜವಾದ ತಾತ್ತ್ವಿಕ ಪ್ರಜ್ಞೆಯ ಲಕ್ಷಣವೆಂದರೆ– ಒಬ್ಬ ವ್ಯಕ್ತಿ ಈಗಿನ ನಿಕಟವರ್ತಿಗಳೊಡನೆ ಮಾತ್ರವಲ್ಲದೆ ತನ್ನ ಪೂರ್ವಿಕರೊಡನೆ, ತನ್ನ ಸುತ್ತಲ ಸಮಾಜದೊಡನೆ ನಿರಂತರವೂ ಆತ್ಮೀಯವೂ ಆದ ಸಂಬಂಧವನ್ನು ಹೊಂದಿರುತ್ತಾನೆ. ಹೀಗೆ ಸದಾ ಭೂತ ವರ್ತಮಾನ ಭವಿಷ್ಯ ಈ ಮೂರು ಕಾಲಗಳಲ್ಲೂ ನಮ್ಮ ಜನರ ಜೀವನ ನಡೆಯುತ್ತಿರುತ್ತದೆ. ಒಬ್ಬೊಬ್ಬ ರೈತನೂ ಒಕ್ಕಲುತನ ಮಾಡುವುದು ಅದರಿಂದ ಬರುವ ಫಸಲಿಗೋಸ್ಕರ ಮಾತ್ರ ಅಲ್ಲ. ಅವನ ಪಾಲಿಗೆ ಅವನ ಗೇಣುದ್ದದ ಅಥವಾ ಮಾರುದ್ದದ ಜಮೀನು ಸೃಷ್ಟಿಯೊಡನೆ, ಸಮಾಜದೊಡನೆ, ತನ್ನ ಪೂರ್ವಿಕರೊಡನೆ ಮತ್ತು ದೇವತೆಗಳೊಡನೆ ತನಗಿರುವ ಗಾಢವಾದ ಸಂಬಂಧದ ಪ್ರತೀಕ. ಭೂಮಿಯ ಮೂಲಕ ರೈತ ಪೂಜಿಸುವುದು ಈ ಚಿರಂತನ ಸಂಬಂಧಗಳನ್ನು. ಇದೇ ಸ್ವದೇಶೀ ದೃಷ್ಟಿ. ಪ್ರಚಲಿತ ಪಾಶ್ಚಾತ್ಯಜನಿತ ವ್ಯವಸ್ಥೆಯಲ್ಲಿ 'ಇಷ್ಟು ಖರ್ಚಿಗೆ ಇಷ್ಟು ಫಸಲು ಬಂದೀತು' ಎಂಬ ಲೆಕ್ಕಾಚಾರ ಮಾತ್ರ ಇರುತ್ತದೆ. ಈ ಸಂಕುಚಿತ ದೃಷ್ಟಿಯಿಂದಾಗಿ ಮಾನವನು ತನ್ನ ನಿಜವಾದ ವ್ಯಕ್ತಿತ್ವವನ್ನೇ ಕಳೆದುಕೊಳ್ಳುತ್ತಿದ್ದಾನೆ.

ಬದಲಾವಣೆಗಳನ್ನಾಗಲಿ ಸಮೃದ್ಧಿಯನ್ನಾಗಲಿ ಸ್ವದೇಶೀ ದರ್ಶನ ತಿರಸ್ಕರಿಸುವುದಿಲ್ಲ. ಆದರೆ ಯಾವುದೇ ಯೋಜನೆಗಳು ಈ ದೇಶದ ಸಹಜ ಸಂಸ್ಕೃತಿಗೆ ಪೂರಕವಾಗಿ ಇರಬೇಕು ಎನ್ನುವುದು ಸ್ವದೇಶೀ ದೃಷ್ಟಿಯ ಆಗ್ರಹ.

ಸಂಸ್ಕೃತಿ, ಸಾತ್ತ್ವಿಕ ಜೀವನ ವಿಧಾನ – ಮೊದಲಾದ ಅಂಶಗಳನ್ನು ನಾವು ಮೇಲಿಂದ ಮೇಲೆ ಒತ್ತಿಹೇಳುತ್ತೇವೆ. ಇದಕ್ಕೆ ಪ್ರಬಲ ಕಾರಣವಿದೆ. ಇಂದಿನ ಹಲವಾರು ಆರ್ಥಿಕ–ಸಾಮಾಜಿಕ ವಿಕೃತಿಗಳ ಮೂಲದಲ್ಲಿರುವುದು ಸಾಂಸ್ಕೃತಿಕ ಪ್ರಜ್ಞೆಯ ಅಭಾವವೇ. ಇಂದಿನ ನಮ್ಮ ಎಲ್ಲಕ್ಕಿಂತ ಹೆಚ್ಚಿನ ದೌರ್ಬಲ್ಯವೆಂದರೆ, – ನಮ್ಮೆಲ್ಲ ಚಿಂತನೆಯೂ ಪಾಶ್ಚಾತ್ಯಾಭಿಮುಖವಾಗಿರುವುದು.

ತಂತ್ರಜ್ಞಾನ ಎಂಬುದು – ವಿಜ್ಞಾನದಂತೆ – ಪಕ್ಷಪಾತಾತೀತವಾಗಿದ್ದ ಕಾಲ ಹಿಂದೆ ಇತ್ತೋ ಏನೋ. ಇಂದಂತೂ ವಿಜ್ಞಾನ–ತಂತ್ರಜ್ಞಾನಗಳು ಶೋಷಣೆಯ ಸಾಧನಗಳಾಗಿವೆ, ಅಪಾರ ಲಾಭಗಳಿಸುವ ಸಾಧನಗಳಷ್ಟೇ ಆಗಿವೆ.

ಪಾಶ್ಚಾತ್ಯ ದೇಶಗಳ ಸ್ಥಿತಿಯನ್ನು ಪ್ರಗತಿಯ ಪರಾಕಾಷ್ಠೆ ಎಂದು ಭಾವಿಸಿದುದಕ್ಕೆ ಬಡರಾಷ್ಟ್ರಗಳು ತೆರುತ್ತಿರುವ ಬೆಲೆ ಹೆಚ್ಚು ಹೆಚ್ಚು ದುಬಾರಿಯಾಗುತ್ತಿದೆ. ಎಲ್ಲ ಸಾಮಗ್ರಿಗಳ ಉತ್ಪಾದನೆಯೂ ಬಳಕೆಯೂ ನಿರಂತರ ಹೆಚ್ಚುತ್ತಲೇ ಹೋಗಬೇಕು – ಎಂಬ ಪಾಶ್ಚಾತ್ಯ ಪ್ರವರ್ತಿತ ಪ್ರಗತಿಸೂತ್ರವು ಅತಾರ್ಕಿಕ. ಆ ಸೂತ್ರವೇ ಮುಂದುವರಿದಲ್ಲಿ ಇನ್ನು ನೂರು ವರ್ಷಗಳಲ್ಲಿ ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಯೂ ಈಗ ಬಳಸುತ್ತಿರುವುದರ 16ಪಟ್ಟು ಹೆಚ್ಚಾಗಿ ಬಳಸುತ್ತಾನೆ. ಇಷ್ಟೊಂದು ಅಧಿಕ ಭಾರವನ್ನು ಭೂಮಿ ತಡೆಯಲಾರದು ಎಂಬುದು ಒತ್ತಟ್ಟಿಗಿರಲಿ. ಹಾಗೆ ಬಳಕೆಯನ್ನು ಹೆಚ್ಚಿಸಿಕೊಳ್ಳುವುದರಿಂದ ದೊರೆಯುವ ಪುರುಷಾರ್ಥವಾದರೂ ಏನು?

ಪಾಶ್ಚಾತ್ಯಮೂಲದ ತಂತ್ರಜ್ಞಾನಾಧಾರಿತ 'ಆಧುನಿಕತೆ'ಯು ಉಧ್ವಸ್ತಗೊಳಿಸುತ್ತಿರುವುದು ಉಳಿದ ಜಗತ್ತಿನ ಬಾಹ್ಯ ಹಾಗೂ ಬೌದ್ಧಿಕ ಸಂಪನ್ಮೂಲಗಳನ್ನು ಮಾತ್ರವಲ್ಲ; ವಿಕೇಂದ್ರೀಕೃತ ವ್ಯವಸ್ಥೆಗಳು, ಸಮಾಜದಲ್ಲಿ ಒಬ್ಬರಿಗೊಬ್ಬರು ಪೂರಕವಾಗಿ ವರ್ತಿಸುವುದು, ತ್ಯಾಗಮನೋಭಾವ ಮೊದಲಾದ ಸಮಾಜಸ್ವಾಸ್ಥ್ಯಪೋಷಕ ಏರ್ಪಾಡುಗಳನ್ನು ನಾಶಪಡಿಸಲಾಗುತ್ತಿದೆ. ಸಾಮುದಾಯಿಕ ಜೀವನದ ಕಲ್ಪನೆಯೇ ಮರೆಯಾಗಿ ಒಬ್ಬೊಬ್ಬ ವ್ಯಕ್ತಿಯೇ ಸೃಷ್ಟಿಯ ಪ್ರತ್ಯೇಕ ಘಟಕವೆಂಬ ಕಲ್ಪನೆ ಬಲಿಯುತ್ತಲಿದೆ. ಸಹಕಾರದ ಸ್ಥಾನವನ್ನು ಸ್ಪರ್ಧೆ ಆಕ್ರಮಿಸುತ್ತಿದೆ.

ಈ ಪ್ರವೃತ್ತಿಯನ್ನು ಒಂದು ಘೋರ ವಿಕೃತಿ ಎಂದು ಪರಿಗಣಿಸುವುದಕ್ಕೆ ಬದಲಾಗಿ ಇದನ್ನು ಪಾಶ್ಚಾತ್ಯ ಪ್ರವರ್ತಿತ 'ಆಧುನಿಕತೆ'ಗೆ ಸಮರ್ಥನೆಯನ್ನಾಗಿ ಬಳಸಲಾಗುತ್ತಿದೆ. ಜೀವನಕ್ಕೆ ದೇಶ–ಕಾಲ–ಸನ್ನಿವೇಶ ಪರಿಮಿತಿಗಳೇ ಇಲ್ಲ – ಎಂಬ ಭ್ರಮೆಯನ್ನು ಮೂಡಿಸಲಾಗಿದೆ. ಹೀಗೆ ಇಂದಿನ ಜಗದ್‌ವ್ಯವಹಾರವೆಲ್ಲ ಅರ್ಧಸತ್ಯಗಳ ಆಧಾರದ ಮೇಲೆಯೇ ಮುಂದುವರಿದಿದೆ.

ವಸ್ತುಸ್ಥಿತಿಯೆಂದರೆ – ಕಳೆದ ಹಲವು ನೂರು ವರ್ಷಗಳಲ್ಲಿ ಪ್ರಚಲಿತಗೊಂಡಿರುವುದು ನಿಜವಾದ ಅರ್ಥದ ನಾಗರಿಕತೆಯ ಹಿನ್ನಡೆಯೇ. ಐರೋಪ್ಯರ ಸಾಮ್ರಾಜ್ಯವಿಸ್ತರಣೆ, ವಸಾಹತೀಕರಣ, ಅದಕ್ಕೆ ಅನುಗುಣವಾದ ಬಂಡವಾಳಶಾಹಿ ಅರ್ಥವ್ಯವಸ್ಥೆ, ವಾಣಿಜ್ಯದ ಜಾಗತೀಕರಣ – ಇವೆಲ್ಲ ಜೂಡಿಯೋ–ಕ್ರಿಶ್ಚಿಯನ್ ವಾರಸಿಕೆಯ ಕೂಸುಗಳೇ.

ಈ ವಿಕೃತಿಯ ಪ್ರವಾಹದ ಸೆಳೆತದಿಂದ ಮುಕ್ತಗೊಳಿಸುವುದನ್ನು ಮಾತ್ರ ಪ್ರಗತಿಯೆಂದೋ ಅಭಿವೃದ್ಧಿಯೆಂದೋ ಏಳ್ಗೆಯೆಂದೋ ಕರೆಯುವುದು ಸಮಂಜಸವಾಗುತ್ತದೆ. ಈಗಿನ ಜಗತ್‌ಸನ್ನಿವೇಶದಲ್ಲಿ 'ಪ್ರಗತಿ'ಗೆ ನೀಡಬಹುದಾದ ಪ್ರಾಥಮಿಕ ವಿವರಣೆಯೆಂದರೆ ವಿಕೃತಿಗಳನ್ನು ನಿವಾರಿಸಿಕೊಂಡು ಸಹಜ ಸ್ವಾಸ್ಥ್ಯವನ್ನು ಮತ್ತೆ ಪಡೆದುಕೊಳ್ಳುವುದು ('ಡೆವಲಪ್' ಎಂಬ ಶಬ್ದದ ಯೌಗಿಕಾರ್ಥವೇ 'ಅನಾವರಣ' ಎಂದು.) ಇದು ಸಾಧ್ಯವಾಗಬೇಕಾದರೆ ಕೇವಲ ಆರ್ಥಿಕ ಪ್ರಾಕಾರದಲ್ಲಿ ಯೋಚಿಸದೆ ಸಮಗ್ರ ದೃಷ್ಟಿಯನ್ನು ತಳೆಯಬೇಕಾಗುತ್ತದೆ. ಈ ದೃಷ್ಟಿಯು ಲಭ್ಯವಿರುವುದು ಪಾಶ್ಚಾತ್ಯೇತರ ಪಾರಂಪರಿಕ ತಾತ್ತ್ವಿಕ ವಾರಸಿಕೆಯಲ್ಲಿ ಮಾತ್ರ. ಈ ವಿಶಾಲ ಜೀವನದರ್ಶನವನ್ನು ಅಧಿಕರಿಸಿದ ಹೊರತು ಆರ್ಥಿಕ ವಿಷಯಗಳಿಗಾಗಲಿ ಪರಿಸರ ವಿನಾಶಕ್ಕಾಗಲಿ ನೀಡಲಾಗುವ ಪರಿಹಾರಗಳು ಅಲ್ಪವ್ಯಾಪ್ತಿಯದಷ್ಟೆ ಆಗುತ್ತವೆ.

ಈಗ ರಾಷ್ಟ್ರೀಯ ಸರ್ಕಾರಗಳಿಗೆ ತಮ್ಮ ಧೋರಣೆಗಳ ಮೇಲೆ ಯಾವ ಹತೋಟಿಯೂ ಉಳಿದಿಲ್ಲ. ಆ ಧೋರಣೆಗಳನ್ನು ನಿರ್ದೇಶಿಸುತ್ತಿರುವವು ರಾಷ್ಟ್ರೋತ್ತರ

ಬಾಹ್ಯ ಶಕ್ತಿಗಳು. ದೀರ್ಘಕಾಲದಿಂದ ರೂಢವಾಗಿದ್ದ ರಾಜಕೀಯ–ಆರ್ಥಿಕ ವ್ಯವಸ್ಥೆಗಳೂ ಕಟ್ಟಳೆಗಳೂ ಸಮಯಾಚಾರಗಳೂ ಈಗ ಧೂಳೀಪಟವಾಗಿವೆ. ಜಾಗತಿಕ ಹಣಕಾಸು ಸಂಸ್ಥೆಗಳ ಪ್ರತಿನಿಧಿಗಳೂ ದೇಶೀಯ ನೇತಾರರೂ ಕೂಡಿಕೊಂಡು ಹೊಸದೊಂದು ಅಧಿಕಾರಸ್ಥಾನ ಜಗತ್ತಿನಲ್ಲಿ ಈಗ ಅಸ್ತಿತ್ವಕ್ಕೆ ಬಂದಿದೆ.

ಭಾರತದ ವಾಸ್ತವ ಸನ್ನಿವೇಶವನ್ನು ಆಧಾರವಾಗಿರಿಸಿಕೊಂಡು ಸುಧಾರಣೆಗಳನ್ನು ಯೋಚಿಸಬೇಕು – ಎಂದು ಯಾರಿಗೂ ಅನ್ನಿಸುತ್ತಲೇ ಇಲ್ಲ. ಈಗಿನ ಆರ್ಥಿಕ ಬೆಳವಣಿಗೆಗಳಿಂದ ಆಭಾಸಗಳನ್ನು ಗಮನಿಸುವ 'ತಜ್ಞ'ರೂ 'ಇವುಗಳ ಬಗ್ಗೆ ಸ್ಪಷ್ಟವಾಗಿ ಮಾತನಾಡಿದಲ್ಲಿ ನಮ್ಮನ್ನೂ ಸುಧಾರಣಾವಿರೋಧಿಗಳೆಂದಾರು' ಎಂದು ಗಾಬರಿಗೊಂಡು ಮೌನಭಾವ ತಳೆಯುತ್ತಾರೆ.

ಶತಮಾನಗಳುದ್ದಕ್ಕೂ ವಿದೇಶೀ ಪ್ರಭುತ್ವಗಳಿಗೆ ಒಳಪಟ್ಟಿದ್ದುದರ ಕಾರಣದಿಂದಲೂ ಏನೋ– ಗುಲಾಮೀ ಬುದ್ಧಿವೃತ್ತಿಯನ್ನು ಕೊಡವಿಕೊಳ್ಳಲು ನಮಗೆ ಇಷ್ಟವಾಗುತ್ತಲೇ ಇಲ್ಲ! ಆಂಗ್ಲರು ನಿರ್ಗಮಿಸಿ ಅರವತ್ತು ವರ್ಷ ದಾಟಿದ್ದರೂ ಮಾನಸಿಕ ದಾಸ್ಯ ಮುಂದುವರಿದಿದೆ. ನ್ಯಾಯವಾಗಿ ಅಮೆರಿಕಕ್ಕೆ ಸವಾಲಾಗುವ ಶಕ್ತಿಯನ್ನು ಹೊಂದಿದ್ದರೂ ನಮ್ಮ ಶಕ್ತಿಯ ಬಗ್ಗೆ ನಮಗೇ ವಿಶ್ವಾಸವಿಲ್ಲ.

ಹಲವರು ಭಾರತೀಯ ಉದ್ಯಮಪತಿಗಳೇ ಬಹುರಾಷ್ಟ್ರೀಯ ಕಂಪೆನಿಗಳ ಪರವಾಗಿ ಮಾತನಾಡುವುದು ಏಕೆ? ಇದು ಸೋಲನ್ನು ತಾವಾಗಿ ಒಪ್ಪಿಕೊಂಡಂತೆಯೇ ಆಗುತ್ತದೆ, ಅಲ್ಲವೇ? ಇದು ಆತ್ಮವಿಶ್ವಾಸದ ಕೊರತೆಯನ್ನೂ ಕೀಳರಿಮೆಯನ್ನೂ ಸೂಚಿಸುತ್ತದೆ. ದೇಶದ ಹಿತದ ದೃಷ್ಟಿಯಿಂದ ಈ ಪ್ರವೃತ್ತಿ ಆರೋಗ್ಯಕರವಲ್ಲ. ವಿದೇಶೀ ಕಂಪೆನಿಗಳ ನಂಟಸ್ತಿಕೆಯಿಂದ ಬೆರಳೆಣಿಕೆಯಷ್ಟು ಸಂಸ್ಥೆಗಳಿಗೆ ಲಾಭವಾದರೂ ಅಧಿಕ ಸಂಖ್ಯೆಯ ದೇಶೀಯ ಕಂಪೆನಿಗಳು ಕುಸಿಯುವುದು ನಿಶ್ಚಿತ. ಸಮಗ್ರ ದೇಶದ ಕ್ಷೇಮದ ಹೊಣೆ ಹೊತ್ತ ಸರ್ಕಾರ ಇದಕ್ಕೆ ಅವಕಾಶ ನೀಡುವುದು ಅಕ್ಷಮ್ಯ.

ವಿಜ್ಞಾನ, ತಂತ್ರಜ್ಞಾನ, ಗಣಕಯಂತ್ರ ಆವಿಷ್ಕರಣ ಮೊದಲಾದ ಹಲವು ಕ್ಷೇತ್ರಗಳಲ್ಲಿ ಇತ್ತೀಚೆಗೆ ಭಾರತೀಯರ ಸಾಧನೆ ಜಗತ್ತನ್ನೆ ಬೆರಗುಗೊಳಿಸಿದೆ. ಇದು ಸಂತೋಷವೇ. ಆದರೆ, ನಮ್ಮ ವಿಜ್ಞಾನಿತಂಡಗಳಿಗೆ ಈ ಪ್ರತಿಭಾಪ್ರದರ್ಶನಕ್ಕೆ ಅವಕಾಶವಾದದ್ದು ವಿದೇಶೀಯರು ತಿರಸ್ಕರಿಸಿ ಅಸಡ್ಡೆ ತೋರಿ ಕಿರುಕುಳ ಕೊಟ್ಟಾದ ಮೇಲೆಯೇ. ಅಲ್ಲಿಯವರೆಗೆ ಕಾಯುವ ಬದಲು ಮೊದಲೇ ಈ ಅವಕಾಶಗಳನ್ನು ನಮ್ಮ ವಿಜ್ಞಾನಿಗಳಿಗೆ ಕೊಟ್ಟು ಸರ್ಕಾರವು ಪ್ರೋತ್ಸಾಹಿಸಬಹುದಿತ್ತಲ್ಲ?

ಇವೆಲ್ಲ ಮಾನಸಿಕ ಜಡತೆಯ ದ್ಯೋತಕಗಳು.

ಹಲವಾರು ವೈಚಾರಿಕ ಭ್ರಮೆಗಳಿಂದ ನಾವು ದೂರಸರಿಯಬೇಕಾಗಿದೆ. ಇದು ಈಗಿನ ಸಂಗ್ರಾಮದ ಮೊದಲ ಹೆಜ್ಜೆ.

ಇಲ್ಲಿ ನಮಗೆ ಶತ್ರುಸ್ಥಾನದಲ್ಲಿರುವುದು ಯಾವುದೋ ಕೆಲವು ರಾಷ್ಟ್ರಗಳಾಗಲಿ ವ್ಯಕ್ತಿಗಳಾಗಲಿ ಜನವರ್ಗಗಳಾಗಲಿ ಮಾತ್ರವಲ್ಲ, ಮುನ್ನೂರು ವರ್ಷಗಳಿಂದ ಬೆಳೆದುಬಂದಿರುವ ಕೆಲವು ಜೀವನ ಸಿದ್ಧಾಂತಗಳೂ ಅವುಗಳ ಹಿಂದಿರುವ ಮಾನಸಿಕತೆಯೂ ನಮ್ಮ ನಿಜವಾದ ಶತ್ರುಗಳು. ಅಂಥ ಮಾನಸಿಕತೆ ಸ್ವಲ್ಪಮಟ್ಟಿಗೆ ನಮ್ಮ ಒಳಗಡೆಯೂ ಮನೆಮಾಡಿಕೊಂಡಿದೆ. ಆದ್ದರಿಂದ ನಾವು ನಮ್ಮ ಮೇಲೂ ವಿಜಯ ಸಾಧಿಸಬೇಕಾಗಿದೆ.

ಈಗ 'ಡಿ–ಕೊಲೊನೈಸೇಷನ್' ಅಥವಾ ಸ್ವದೇಶೀಕರಣ ಆಗಬೇಕಾದರೆ, ಇದರ ಚರ್ಚೆಯೂ ನಮ್ಮ ದೇಶೀಯ ಪರಿಭಾಷೆಯಲ್ಲಿಯೇ ನಡೆಯಬೇಕಾಗುತ್ತದೆ. ನಾವು ಎಲೀಟ್ ಪರಿಭಾಷೆಯನ್ನು ಬಿಸಾಡಬೇಕಾಗುತ್ತದೆ. ಪರಿಭಾಷೆಯೆಂದರೆ ಸಂವಾದದ ನುಡಿಗಟ್ಟು. ಎಲ್ಲಿಯವರೆಗೆ ನಾವು ಎಲೀಟ್ ಪರಿಭಾಷೆಗೆ ಅಂಟಿಕೊಂಡಿರುತ್ತೇವೋ ಅಲ್ಲಿಯವರೆಗೆ 'ಡಿ–ಕೊಲೊನೈಸೇಷನ್' ಸಾಧ್ಯವಾಗದು.

ಈಗ ನಮ್ಮಲ್ಲಿ ಮನೆಮಾಡಿರುವ ಮಾನಸಿಕ ಗುಲಾಮಿತನದಲ್ಲಿ ಹೀಗೆ ಹಲವು ಎಳೆಗಳಿವೆ. ಮಾನಸಿಕ ದಾಸ್ಯದಿಂದ ನಾವು ಹೊರಬರಲಾರೆವಾದರೆ ಈಗ ಎರಗಿರುವ ವಿದೇಶೀ ಆಕ್ರಮಣ, ಸಾಂಸ್ಕೃತಿಕ ಆಕ್ರಮಣ – ಎರಡನ್ನೂ ಎದುರಿಸಲಾಗುವುದಿಲ್ಲ; ವಿದೇಶೀ ಸರಕಾರಗಳನ್ನೂ ಕಂಪೆನಿಗಳನ್ನೂ ಎಷ್ಟು ಉಚ್ಚಸ್ವರದಲ್ಲಿ ನಿಂದಿಸಿದರೂ ಪ್ರಯೋಜನ ಕಡಮೆಯೇ.

ಈಗ ನಡೆದಿರುವ ಆರ್ಥಿಕ ಆಕ್ರಮಣಕ್ಕಿಂತ ಬಹುಪಾಲು ಹೆಚ್ಚು ಹಾನಿಕರವಾದದ್ದು ಈಗ ನಡೆದಿರುವ ಸಾಂಸ್ಕೃತಿಕ ಆಕ್ರಮಣ. ನಮ್ಮ ವಿಶಿಷ್ಟ ಸಾಮಾಜಿಕ ಹಿನ್ನೆಲೆಯನ್ನೂ ನಮ್ಮ ಪ್ರಮುಖ ಶಕ್ತಿ ಸಾಮರ್ಥ್ಯ ಸಂಪನ್ಮೂಲಗಳನ್ನೂ ನಮ್ಮ ದೇಶದ ಆದ್ಯತೆಗಳನ್ನೂ ಉದಾಸೀನ ಮಾಡಿ ಯಾರಾರೋ ನೀಡಿದ ಬೋಧೆಗಳನ್ನು ಕೇಳುತ್ತ ಬಂದಿರುವುದಕ್ಕೆ ನಾವೀಗ ಅಪಾರ ಬೆಲೆ ತೆರುತ್ತಿದ್ದೇವೆ.

ಈ ಸ್ಥಿತಿಯನ್ನು ಅನೇಕ ನವಭಾರತ ನಿರ್ಮಾಪಕರು ನಿರೀಕ್ಷಿಸಿಯೂ ಇದ್ದರು. 'ಸ್ವಾತಂತ್ರ್ಯವನ್ನೇನೊ ಪಡೆದುಕೊಳ್ಳಲಾದೀತು. ಆದರೆ ಅದನ್ನು ನೀವು ಜೀರ್ಣಿಸಿಕೊಳ್ಳಬಲ್ಲಿರಾ? ಆ ಶಕ್ತಿಯನ್ನು ಬೆಳೆಸಿಕೊಂಡಿದ್ದೀರಾ?' ಎಂದು ಸ್ವಾಮಿ ವಿವೇಕಾನಂದರು ಕೇಳುತ್ತಿದ್ದರು. 1925ರಷ್ಟು ಹಿಂದೆಯೇ ಸ್ವಾಮಿ ಶ್ರದ್ಧಾನಂದರು ಅನ್ನುತ್ತಿದ್ದ ಮಾತು ಇದು: 'ಅಂಗ್ರೇಜ್ ಲೋಗೋಂ ತೋ ಇಧರ್ ಸೇ ಚಲೇಜಾತೇ ಹೈ. ಲೇಕಿನ್ ಅಂಗ್ರೇಜಿಯತ್ ಇಧರ್ ರಹಜಾಯೇಗೀ.' ಆ ಮಾತುಗಳು ಒಂಬತ್ತು ದಶಕಗಳು ಕಳೆದ ಮೇಲೂ ಈಗಲೂ ಯಥಾರ್ಥವೇ ಎನಿಸಿವೆ.

ನಮ್ಮ ಪ್ರಬಲ ಶತ್ರು ಪಾಕಿಸ್ತಾನವೋ ಬೇರೊಂದು ದೇಶವೋ ಅಲ್ಲ: ನಾವು ಬೆಳೆಸಿಕೊಂಡಿರುವ ಕೊಳ್ಳುಬಾಕ ಸಂಸ್ಕೃತಿ, ಅದನ್ನೊಡಗೂಡಿ ಆಗುತ್ತಿರುವ ನೈತಿಕ ಕುಸಿತ.

ಇದೆಲ್ಲ ಕೇವಲ ವ್ಯಾಪಾರದ ವಿಷಯವಲ್ಲ. ಇಂಥ ವಿಚಾರಶೂನ್ಯ ವರ್ತನೆಯ ಮೂಲಕ ನಾವು ನಮ್ಮ ಸಂಸ್ಕೃತಿಯನ್ನೂ ದೇಶದ ಸ್ವಾಯತ್ತತೆಯನ್ನೂ ಒಟ್ಟಿಗೇ ಬಲಿಗೊಡುತ್ತಿದ್ದೇವೆ – ಎಂಬುದೇ ಸಾರತತ್ತ್ವ. ಇನ್ನೂರು ವರ್ಷಗಳ ಶ್ರಮದಿಂದ ಗಳಿಸಿದ ಸ್ವಾತಂತ್ರ್ಯವೂ ಹಲವು ಸಾವಿರ ವರ್ಷಗಳ ಸಂಸ್ಕೃತಿಯೂ ಉಧ್ವಸ್ತಗೊಳ್ಳಲು ನೆರವಾದವರು ಎಂದು ಈ ಪೀಳಿಗೆಯ ಬಗ್ಗೆ ಮುಂದಿನವರು ಉಲ್ಲೇಖ ಮಾಡುವಂತಾಗಬಾರದು. ಸ್ವಾತಂತ್ರ್ಯವನ್ನೂ ಸಂಸ್ಕೃತಿಯನ್ನೂ ಕಳೆಯುವುದು ಸುಲಭ; ಪಡೆಯುವುದೂ ಊರ್ಜಿತವಾಗಿರಿಸುವುದೂ ಕಷ್ಟ. ಒಮ್ಮೆ ಕಳೆದುಕೊಂಡೆವೆಂದರೆ ಅವನ್ನು ಮತ್ತೆ ಗಳಿಸಲು ದೀರ್ಘಕಾಲದ ಅಪಾರ ಶ್ರಮ ಹಿಡಿಯುತ್ತದೆ.

'ಸ್ವರಾಜ್ಯಪ್ರಾಪ್ತಿ ಪೂರ್ಣಗೊಳ್ಳುವುದು ಸ್ವದೇಶೀ ಆಚರಣೆಯಿಂದ' ಎಂದಿದ್ದರು, ಮಹಾತ್ಮಗಾಂಧಿ. ಸ್ವಧರ್ಮ, ಸ್ವರಾಷ್ಟ್ರ, ಸ್ವರಾಜ್ಯ – ಈ ಕಲ್ಪನೆಗಳಂತೆ ಸ್ವದೇಶೀ ಕಲ್ಪನೆಯೂ ನಮಗೆ ಪರಂಪರಾಗತ. ರಾಷ್ಟ್ರೀಯ ಜೀವನದ ಸಾಂಸ್ಕೃತಿಕ, ರಾಜಕೀಯ ಹಾಗೂ ಆರ್ಥಿಕ ಮುಖಗಳೆಲ್ಲವನ್ನೂ ಒಳಗೊಂಡದ್ದು ಸ್ವದೇಶೀ ಎಂದಿದ್ದರು ಗಾಂಧಿ. ಇದನ್ನೇ ಪುರುಷಾರ್ಥಚತುಷ್ಟಯದ ಆಧಾರದ ಮೇಲೆ ಪಂಡಿತ್ ದೀನದಯಾಳ ಉಪಾಧ್ಯಾಯ ಅವರು 'ಏಕಾತ್ಮ ಮಾನವದರ್ಶನ'ವೆಂದು ಸೂತ್ರಿಸಿದರು. ಮಹರ್ಷಿ ಅರವಿಂದರು 'ಸ್ವದೇಶೀ ಎಂಬುದೇ ಭಾರತೀಯ ಜೀವನಕ್ರಮದ ಸಹಜಸ್ಥಿತಿ; ಉಳಿದವೆಲ್ಲ ವಿಕೃತಿಗಳು' ಎಂದಿದ್ದರು.

ಸ್ವಾತಂತ್ರ್ಯ ಸಂಘರ್ಷದ ದಿನಗಳಲ್ಲಿಯೂ ಸ್ವಾತಂತ್ರ್ಯೋತ್ತರ ಆರಂಭದ ವರ್ಷಗಳಲ್ಲಿಯೂ ಗಾಂಧಿ, ವಿನೋಬಾ ಭಾವೆ, ಜಯಪ್ರಕಾಶ ನಾರಾಯಣ್, ಶ್ರೀಗುರೂಜಿ ಮೊದಲಾದ ಭಿನ್ನಧಾರೆಗಳ ಚಿಂತಕರೆಲ್ಲರೂ ಇಂಥ ವ್ಯಾಪಕ ಸ್ವದೇಶೀ ಪ್ರಸ್ಥಾನವನ್ನೇ ಎತ್ತಿಹಿಡಿದಿದ್ದರು. ಅದರ ಬಗ್ಗೆ ಬಹುಮಟ್ಟಿಗೆ ಆಗ ಒಮ್ಮತ ಇದ್ದಿತು.

ಇವತ್ತು ನಡೆಯುತ್ತಿರುವ ಸಂಘರ್ಷ ಸ್ಥಳೀಯ ಸಂಸ್ಕೃತಿ ಮತ್ತು ವಿಶ್ವಮಾರುಕಟ್ಟೆಗಳ ನಡುವೆ. ನಮ್ಮ ವಿರೋಧ ಇರುವುದು ಜಾಗತೀಕರಣಕ್ಕೆ ಅಲ್ಲ; ಜಾಗತೀಕರಣದ ಹೆಸರಲ್ಲಿ ಇಡೀ ಮನುಷ್ಯಜೀವನವನ್ನು ವಾಣಿಜ್ಯ ವ್ಯವಹಾರದ ಸೀಮಿತ ಚೌಕಟ್ಟಿಗೆ ಅಳವಡಿಸುವ ಪ್ರಯತ್ನವನ್ನು ನಾವು ವಿರೋಧಿಸಬೇಕಾಗಿದೆ.

ನಮ್ಮ ಚರಿತ್ರೆಯನ್ನು ಅವಲೋಕಿಸಿದಾಗ ನಮಗೆ ತೋರುವ ವೈಶಿಷ್ಟ್ಯವೆಂದರೆ – ಭಾರತದಲ್ಲಿ ನಾಗರಿಕತೆ ಮತ್ತು ರಾಜಕೀಯ ಆರ್ಥಿಕ ಅಗತ್ಯಗಳು – ಇವುಗಳ ನಡುವೆ ಸೂತ್ರಬದ್ಧತೆ ಇದ್ದಿತು. ನಮ್ಮ ಸಮಾಜ ಕ್ರಿಯಾಶೀಲವಾಗಿದ್ದುದಕ್ಕೆ ಮುಖ್ಯಕಾರಣ ಈ ಸೂತ್ರಬದ್ಧತೆ – internal cohesion. ಅದನ್ನೇ ನಾವು ಈಗಿನ ಭಾಷೆಯಲ್ಲಿ ಸ್ವದೇಶೀ ಪ್ರಣಾಳಿ ಎಂದು ಕರೆಯುವುದು. ಸ್ವದೇಶೀ ವರ್ತನೆ ಎಂದರೆ ಹೊಸದೇನನ್ನೋ ಮಾಡುವುದು ಎಂದಲ್ಲ; ಸಮಾಜವು ತನ್ನ ಸಹಜಸ್ಥಿತಿಗೆ ಹಿಂದಿರುಗಿ ಬರುವುದು ಎಂದು ಅರ್ಥ, ಅಷ್ಟೆ.

ಪಾಶ್ಚಾತ್ತ್ಯ ಸಮಾಜಗಳ ಜೀವನವಷ್ಟೂ ಹೊರಗಿನ ಕೃತಕ ವ್ಯವಸ್ಥೆಗಳನ್ನು ಅವಲಂಬಿಸಿರುತ್ತದೆ. ಆ ದೇಶಗಳಲ್ಲಿ ಸರ್ಕಾರದ ಹೆಗಲ ಮೇಲಿರುವ ಹತ್ತಾರು ದೈನಂದಿನ ಹೊಣೆಗಾರಿಕೆಗಳನ್ನು ಭಾರತದಲ್ಲಿ ಕೌಟುಂಬಿಕ ವ್ಯವಸ್ಥೆಯೇ ಸಹಜವಾಗಿ ನಿಭಾಯಿಸುತ್ತಿದೆ.

ಇದೀಗ ತಿರುಪತಿಯಲ್ಲಿಯೊ ಧರ್ಮಸ್ಥಳದಲ್ಲಿಯೊ ಅದೆಷ್ಟು ಸಾವಿರ ಜನರಿಗೆ ಪ್ರತಿದಿನ ಅನ್ನದಾನ ನಡೆಯುತ್ತಿದೆ! ಇಂಥ ಕೆಲಸಗಳನ್ನು ಯಾವುದೇ ಸರ್ಕಾರ ಎಂದಿಗೂ ಮಾಡಲಾಗುವುದಿಲ್ಲ. ಇಂಥ ವ್ಯವಹಾರಗಳಾವುವೂ ಫೆಬ್ರುವರಿ ತಿಂಗಳಲ್ಲಿ ಮಂಡಿತವಾಗುವ ಸರ್ಕಾರಿ ಬಜೆಟಿನಲ್ಲಿ ಉಲ್ಲೇಖಗೊಳ್ಳುವುದಿಲ್ಲ.

ಸರ್ಕಾರ ತಾನು ಹಿಂದಿನಿಂದ ವಹಿಸಿಕೊಂಡಿದ್ದ ಕೆಲಸಗಳನ್ನೇ ನಿರ್ವಹಿಸಲಾಗದೆ ಕುಸಿಯುತ್ತಿದೆ. ಇದಕ್ಕೆ ಪ್ರತಿಯಾಗಿ, ಶಿಕ್ಷಣ, ಆರೋಗ್ಯ, ನೀರಾವರಿ ಮೊದಲಾದ ಮುಖ್ಯ ವ್ಯಾವಹಾರಿಕ ಅಗತ್ಯಗಳನ್ನೆಲ್ಲ ಸಮಾಜ ತಾನೇ ನಿರ್ವಹಿಸಿಕೊಳ್ಳುವ ದೀರ್ಘಕಾಲದ ಪರಂಪರೆಯೇ ಭಾರತದಲ್ಲಿ ಇದೆ. ಇದಕ್ಕೆ ಹೊರಗಿನಿಂದ ಬರುವ ಉಪದ್ರವಗಳನ್ನು ಸರ್ಕಾರ ನಿವಾರಿಸಿದರೆ ಸಾಕು, ಇನ್ನೇನೂ ಬೇಡ.

ಆಧುನಿಕತೆಯನ್ನು ವಿರೋಧಿಸಬೇಕು ಎಂಬುದು ನಮ್ಮ ದೃಷ್ಟಿಯಲ್ಲ. ಈಗ ಆಗಿರುವುದೆಂದರೆ – ವಿದೇಶೀಯರು ವಿಧಿಸಿದ ರೀತಿಯಲ್ಲಿಯೇ ನಾವು ಯೋಚನೆ ಮಾಡುವ ಅಭ್ಯಾಸ ಮಾಡಿಕೊಂಡಿದ್ದೇವೆ. ಈ ಪ್ರಕ್ರಿಯೆಯಲ್ಲಿ ಗೆಲ್ಲುವವರು ವಿದೇಶೀಯರೇ. ಏಕೆಂದರೆ Rules of the game ಮಾಡಿಟ್ಟಿರುವವರು ಅವರೇ. ಅವನ್ನು ಬದಲಾಯಿಸಲು ನಾವು ಇದುವರೆಗೆ ಪ್ರಯತ್ನಿಸಲೇ ಇಲ್ಲ. ಕೀಳರಿಮೆಯ ಒಂದು ಲಕ್ಷಣವೆಂದರೆ – ನಮ್ಮನ್ನು ದಮನ ಮಾಡುತ್ತಿರುವವರನ್ನೇ ನಾವು ಅನುಕರಣೆ ಮಾಡಲು ಹೋಗುವುದು. ನಮ್ಮ ಅನುಕರಣೆ ಸಫಲವಾದರೆ ಪಾಶ್ಚಾತ್ತ್ಯರು ನಮ್ಮನ್ನು ಮಾನ್ಯ ಮಾಡುತ್ತಾರೆ – ಎಂಬ ಭ್ರಮೆಯಲ್ಲಿ ನಾವು ಇದ್ದೇವೆ. ಆದರೆ ವಾಸ್ತವ ಅನುಭವ ಇದಕ್ಕೆ ವಿರುದ್ಧವೇ ಆಗಿದೆ.

ಸ್ವಾಭಿಮಾನ ಉಳಿಸಿಕೊಂಡವರು ಎಂಥ ಆಘಾತಗಳಿಂದಲೂ ಪಾರಾಗುತ್ತಾರೆ. ಸ್ವಾಭಿಮಾನ ಕಳೆದುಕೊಂಡವರು ನಾಶವಾಗಲು ಒಂದು ಸಣ್ಣ ಬಿರುಗಾಳಿಯೂ ಸಾಕಾಗುತ್ತದೆ.

ಪಾಶ್ಚಾತ್ತ್ಯರ ಆಕ್ರಮಣಶೀಲತೆಯನ್ನು ಟೀಕಿಸಿ ಗೋಳಾಡಿ ಪ್ರಯೋಜನವಿಲ್ಲ. ಅವರು ಇರುವುದೇ ಹಾಗೆ. ನಾವು ನಮ್ಮ ದೌರ್ಬಲ್ಯಗಳನ್ನು ಗುರುತಿಸಿಕೊಂಡು ನಮ್ಮ ನೈತಿಕ–ಸಾಂಸ್ಕೃತಿಕ ಉತ್ಥಾನಕ್ಕೆ ಗಮನ ಕೊಡುವುದು ಹೆಚ್ಚು ಲಾಭಕರ – ಎಂಬುದೇ ಸ್ವದೇಶೀ ಸಂದೇಶ.

ಸರ್ಕಾರಗಳ ಮೂಲಕ ಅಭ್ಯುದಯ ಸಾಧ್ಯ ಎನ್ನುವುದು ಭ್ರಮೆ. ಪಾಶ್ಚಾತ್ತ್ಯ ಸಮಾಜಗಳು ವ್ಯಕ್ತಿಕೇಂದ್ರಿತ. ಅಲ್ಲಿ ವ್ಯಕ್ತಿ, ಸರ್ಕಾರ – ಈ ಎರಡೇ ಅಂಗಗಳು ಪ್ರಮುಖವಾಗಿ ಕೆಲಸ ಮಾಡುತ್ತವೆ. ಆದರೆ

ಭಾರತದಲ್ಲಿ ಕುಟುಂಬ, ಸಮಾಜ ಮೊದಲಾದ ಇತರ ಅಂಗಗಳು ಪ್ರಧಾನವಾದವು. ಇಲ್ಲಿ ಒಬ್ಬ ತೀರಾ ಬಡವ್ಯಕ್ತಿಯೂ ವರ್ಷಾನುಗಟ್ಟಲೆ ಶ್ರಮಪಟ್ಟು ತನ್ನ ತಂಗಿಯ ಮದುವೆ ಮಾಡುತ್ತಾನೆ. ಇವೆಲ್ಲ ನಡೆಯುವುದು ಸ್ವಪ್ರೇರಣೆಯಿಂದಲೇ ಹೊರತು ಕಾನೂನು ವ್ಯವಸ್ಥೆಗಳಿಂದಲ್ಲ.

ಜೀವನದ ಅನೇಕ ಸನ್ನಿವೇಶಗಳಲ್ಲಿ ಹೊರಕ್ಕೆ ಕಾಣುವ ಅಂಶಗಳಿಗಿಂತ ಕಾಣದ ಒಳಗಿನ ಅಂಶಗಳೇ ಮಹತ್ತ್ವದ್ದಾಗಿರುತ್ತವೆ. ಸಂಸ್ಕೃತಿಯೂ ಅಂಥ ಒಂದು ಅಂಶ. ಹೊರಗಿನ ವ್ಯವಹಾರಗಳನ್ನು ಅರ್ಥವಂತವಾಗಿಸುವುದು, ಸೌಹಾರ್ದಮಯಗೊಳಿಸುವುದು, ಉಲ್ಲಾಸಮಯಗೊಳಿಸುವುದು ಒಳಗಿನ ಸಂಸ್ಕೃತಿ. ಹೋಟೆಲ್ ಊಟಕ್ಕೂ ಮನೆಯಲ್ಲಿ ತಾಯಿ ಬಡಿಸುವ ಊಟಕ್ಕೂ ವ್ಯತ್ಯಾಸ ಇರುವುದು ಸಾಮಗ್ರಿಯಲ್ಲಲ್ಲ, ಅದರ ಹಿಂದಿನ ಮಾನಸಿಕತೆಯಲ್ಲಿ, ಪ್ರೀತಿಯಲ್ಲಿ. ಕೇವಲ ವ್ಯಾವಹರಿಕ ದೃಷ್ಟಿಯಿಂದಲೇ ನೋಡಿದರೂ, ಸುಸಂಸ್ಕೃತಿ ಇದ್ದಲ್ಲಿ ಹೊರಗಿನ ವ್ಯವಹಾರವೂ ಸಮರ್ಪಕವಾಗಿ ನಡೆಯುತ್ತದೆ, ಸುಗಮವಾಗಿ ನಡೆಯುತ್ತದೆ.

ಮಾರುಕಟ್ಟೆಯ ಪ್ರಾಧಾನ್ಯವೂ ಕೊಳ್ಳುಬಾಕ ಪ್ರವೃತ್ತಿಯೂ ಸರ್ವವ್ಯಾಪಿಯಾದಾಗ ಇಂಥ ಸೂಕ್ಷ್ಮಾಂಶಗಳೆಲ್ಲ ಜೀವನದಿಂದ ಮರೆಯಾಗುತ್ತವೆ. ಹೀಗೆ ಜೀವನ ಬರಡಾಗುತ್ತದೆ.

ಒಂದು ರಾಷ್ಟ್ರದ ನಿಜವಾದ ಶಕ್ತಿ ಇರುವುದು ಅದರ ಸ್ವಾವಲಂಬನೆಯಲ್ಲಿಯೇ ಹೊರತು ಬೇರೆ ಯಾವುದೇ ಆಡಂಬರಗಳಲ್ಲಲ್ಲ. ಜಗತ್ತು ಗೌರವಿಸುವುದು ಅಂತಿಮವಾಗಿ ಇದನ್ನೇ. ಒಂದು ರಾಷ್ಟ್ರದ ಸ್ವಾತಂತ್ರ್ಯಕ್ಕೆ ಬುನಾದಿಯಾಗಿ ಇರಬಲ್ಲದ್ದು ಸ್ವಾವಲಂಬನ ಪ್ರವೃತ್ತಿ. ಸ್ವಾತಂತ್ರ್ಯವನ್ನೇ ನಾವು ಅಗ್ಗಗೊಳಿಸಿಬಿಟ್ಟರೆ ನಮ್ಮ ದೇಶಕ್ಕೆ ಜಗತ್ತಿನಲ್ಲಿ ಕವಡೆಯಷ್ಟೂ ಬೆಲೆ ಉಳಿಯುವುದಿಲ್ಲ.

ಬಿಪಿನ್‌ಚಂದ್ರಪಾಲ್‌ರಂಥ ದೊಡ್ಡ ವ್ಯಕ್ತಿ ಅಮೆರಿಕದಲ್ಲಿ ಭಾಷಣ ಮಾಡುತ್ತಿದ್ದಾಗ ಅಲ್ಲಿಯ ಯಃಕಶ್ಚಿತ ವ್ಯಕ್ತಿಯೊಬ್ಬ ವ್ಯಂಗ್ಯವಾಗಿ ಹೇಳಿದ್ದ: 'Let your country achieve independence first. Then come and talk to us about your religion and philosophy. Then we shall listen to you' ಎಂದು.

ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು 1919ರಲ್ಲಿ ಅಮೆರಿಕಕ್ಕೆ ಭೇಟಿ ನೀಡಿ, ಬ್ಯಾಂಕಿಂಗ್ ಉದ್ಯಮಕ್ಕೆ ಸಂಬಂಧಿಸಿದಂತೆ ಸಲಹೆ ಕೋರಿದಾಗ ವಾಷಿಂಗ್ಟನ್ನಿನ ಫೆಡರಲ್ ರಿಜರ್ವ್ ಬೋರ್ಡಿನ ಗವರ್ನರ್ ಅವರಿಗೆ ಹೇಳಿದ: 'No useful purpose would be served in tendering advice to a man from a country which was not free' – ಎಂದು.

ಕಡೆಯದಾಗಿ: ನಾವೆಲ್ಲ ಆಯ್ದುಕೊಂಡಿರುವ ಸೇವಾಜೀವನದ ಬಗೆಗೆ ಎರಡು ಮಾತು. ಇಂದು ಹೆಚ್ಚಿನ ರಾಜಕೀಯ–ಆರ್ಥಿಕ ವ್ಯವಸ್ಥೆಗಳು ಕುಸಿಯುತ್ತಿರುವುದನ್ನು ಕಾಣುತ್ತಿದ್ದೇವೆ. ಬಡತನ, ನಿರಕ್ಷರತೆ, ಅನಾರೋಗ್ಯ ಮೊದಲಾದ ಸಮಸ್ಯೆಗಳಿಗೆ ಹೊರಗಿನಿಂದ ಯಾಂತ್ರಿಕ ಪರಿಹಾರ ಒದಗಿಸುವ ಪ್ರಯತ್ನಗಳು ನಿರೀಕ್ಷಿತ ಸಫಲತೆಯನ್ನು ನೀಡಿಲ್ಲ. ಏಕೆಂದರೆ ಹೆಚ್ಚಿನ ಸಮಸ್ಯೆಗಳ ಮೂಲ ಆಂತರಿಕ ಸ್ತರದಲ್ಲಿ ಇರುತ್ತದೆ. ಆದ್ದರಿಂದ ಆಗಲೇ ಹೇಳಿದ ಹಾಗೆ ಮಾನಸಿಕ–ಬೌದ್ಧಿಕ ಪರಿಸರ ಉತ್ತಮಗೊಂಡ ಹೊರತು ಕೇವಲ ಬಾಹ್ಯನಿಷ್ಠ ಅಭ್ಯುದಯ ಯೋಜನೆಗಳು ಸಫಲವಾಗುವುದು ದುಷ್ಕರ. ಜೀವನವನ್ನು ಅರ್ಥಪೂರ್ಣಗೊಳಿಸುವ ಭಾವನೆಗಳು ನೈತಿಕವಾದುವು, ಧಾರ್ಮಿಕವಾದುವು, ಆಧ್ಯಾತ್ಮಿಕವಾದುವು. ಈ ಅಸ್ತಿಭಾರ ದೃಢವೂ ಚೈತನ್ಯಪೂರ್ಣವೂ ವಿಶಾಲವೂ ಆದಲ್ಲಿ ಅತ್ಯಲ್ಪ ಬಾಹ್ಯ ಪ್ರಯತ್ನದಿಂದಲೂ ಗಣನೀಯ ಸಮಾಜಾಭ್ಯುದಯವನ್ನು ಸಾಧಿಸಲಾದೀತು. ಆರೋಗ್ಯವಂತ ಜೀವನದೃಷ್ಟಿಯೂ ಧಾರ್ಮಿಕ ಮನೋವೃತ್ತಿಯೂ ವ್ಯಕ್ತಿಯ ಆತ್ಮಗೌರವವೂ ದುರ್ಬಲಗೊಂಡಿರುವುದೇ ಮಿಕ್ಕೆಲ್ಲ ಸಮಸ್ಯೆಗಳ ಮೂಲ. ಈ ಆಂತರಂಗಿಕ ಶಕ್ತಿಗಳನ್ನು ಜಾಗ್ರತಗೊಳಿಸುವುದು ಸಾಮಾಜಿಕ ಸ್ವಾಸ್ಥ್ಯ ಸಾಧಿಸಲು ಆಗಬೇಕಾದ ಮೊದಲಕ್ರಮ.

ಕಳೆದ ಐವತ್ತು ವರ್ಷಗಳಲ್ಲಿ ಔದ್ಯಮಿಕ ಮೊದಲಾದ ಹಲವಾರು ಕ್ಷೇತ್ರಗಳಲ್ಲಿ ಎಷ್ಟೋ ಬೃಹತ್ ಯೋಜನೆಗಳು ನಡೆದುಬಂದಿವೆ. ಆದರೆ ಇಂಥ ಪ್ರಯಾಸಗಳಿಂದ ನಾವು ನಿರ್ಮಿಸಹೊರಟಿರುವ ಮನುಷ್ಯ ಎಂಥವನು ಎಂಬುದರ ಬಗೆಗೆ ಸ್ಪಷ್ಟ ಕಲ್ಪನೆ ಇರದಿದ್ದಲ್ಲಿ ತುಂಬ ಹೆಚ್ಚಿನ ಸಾಧನೆಯೇನೂ ಆಗದು.

ನಾವು ಜಗತ್ತಿನಲ್ಲಿ ಮೂರು ವಿಧದ ಸಮನ್ವಯಗಳನ್ನು ಸಾಧಿಸಬೇಕು – ಎಂದಿದ್ದಾನೆ ಖ್ಯಾತ ಚಿಂತಕ ಬರ್ಟ್ರಂಡ್ ರಸೆಲ್ : (1) ಮನುಷ್ಯನಿಗೂ ಪ್ರಕೃತಿಗೂ ನಡುವೆ ಹೊಂದಾಣಿಕೆ; (2) ವ್ಯಕ್ತಿಗೂ ಸಮಾಜಕ್ಕೂ ನಡುವೆ ಹೊಂದಾಣಿಕೆ; ಮತ್ತು (3) ನಮ್ಮ ಅಂತರಂಗದಲ್ಲಿಯೇ ಇರುವ ಬೇರೆ ಬೇರೆ ಶಕ್ತಿ–ಪ್ರವೃತ್ತಿಗಳ ನಡುವೆ ಹೊಂದಾಣಿಕೆ.

ಬಾಹ್ಯ ಹಾಗೂ ಆಂತರಿಕ ಅಗತ್ಯಗಳ ನಡುವೆ ಸಮನ್ವಯ ಸಾಧಿಸಿದ್ದುದೇ ನಮ್ಮ ಪರಂಪರೆಯ ವೈಶಿಷ್ಟ್ಯ. ಈ ಮೂಲಭೂತ ತತ್ತ್ವದ ಹಿನ್ನೆಲೆಯಲ್ಲಿ ನೋಡಿದಾಗ 'ಸೇವೆ' ಎಂಬುದು ವ್ಯಕ್ತಿ–ವ್ಯಕ್ತಿಗಳ ನಡುವಣ ಅತ್ಯಂತ ಉದಾತ್ತವಾದ ಸಂಬಂಧ – ಎಂಬುದು ಮನವರಿಕೆಯಾಗುತ್ತದೆ. ಜನರಲ್ಲಿ ಪರಸ್ಪರ ಸಹಕಾರ ಇದ್ದರೆ ಮಾತ್ರ ಒಟ್ಟು ಸಮಾಜದ ಮುನ್ನಡೆ ಶಕ್ಯವಾಗುತ್ತದೆ.

ಇದಿಷ್ಟು ತಾತ್ತ್ವಿಕ ಚಿಂತನೆಯಾಯಿತು. ಕೇವಲ ವ್ಯಾವಹಾರಿಕ ದೃಷ್ಟಿಯಿಂದಲೇ ನೋಡಿದರೂ ಸಮಾಜದ ಸುಸ್ಥಿತಿಗೆ ಸೇವಾಕಾರ್ಯಗಳು ಅನಿವಾರ್ಯವೆನಿಸುತ್ತವೆ. ಏಕೆಂದರೆ ರಾಜಕೀಯ, ಆರ್ಥಿಕ, ಆಡಳಿತ ಸಂರಚನೆಗಳ ಕ್ಷೇತ್ರವೂ ವ್ಯಾಪ್ತಿಯೂ ಸೀಮಿತವಾದುದು. ಜನರಲ್ಲಿ ಸಹಕಾರ ಪ್ರವೃತ್ತಿಯೂ ಸೇವಾ ಮನೋಧರ್ಮವೂ ವ್ಯಾಪಕವಾಗಿ ಹರಡಿದಲ್ಲಿ ಮಾತ್ರ ರಾಜಕೀಯ ವ್ಯವಸ್ಥೆಗೂ ಸಮಾಜಕ್ಕೂ ನಡುವೆ ಈಗ ಉಂಟಾಗಿರುವ ಬಿರುಕು ಕಡಮೆಯಾಗಬಹುದು.

ಸಮಾಜದಲ್ಲಿ ಸಾತ್ತ್ವಿಕತೆ ತಾಮಸಿಕತೆ ಸುಧಾರಣಪ್ರಿಯತೆ – ಇವೆಲ್ಲ ಒಟ್ಟೊಟ್ಟಿಗೆ ನಿರಂತರವಾಗಿ ಮುಂದುವರಿದಿರುತ್ತದೆ. ಇದು ನಿಸರ್ಗಮಯ. ಸಮಾಜವನ್ನು ಸಹಜಸ್ಥಿತಿಗೆ ಹಿಂದಿರುಗಿಸಲು ನಡೆಸುವ ಪ್ರಯತ್ನಗಳನ್ನೇ ನಾವು 'ಸೇವೆ' ಎಂದು ಪಾರಿಭಾಷಿಕವಾಗಿ ಕರೆದಿರುವುದು.

ಇಂತ ಲೋಕಹಿತದೃಷ್ಟಿಯು ಪರಿಪಕ್ವ ವ್ಯಕ್ತಿತ್ವದ ಲಕ್ಷಣ.

ಸೇವಾ ಮನೋವೃತ್ತಿ ಆಧ್ಯಾತ್ಮಿಕ ಪಯಣವನ್ನು ಸುಗಮಗೊಳಿಸುವ ಸಾಧನವೂ ಹೌದು. ನಮ್ಮ ಪರಂಪರೆಯ ಸುಧಾರಕರಲ್ಲನೇಕರು ಆಧ್ಯಾತ್ಮಿಕ ಸಾಧಕರಾಗಿದ್ದಂತೆ ಶ್ರೇಷ್ಠ ಸಮಾಜಸೇವಕರೂ ಆಗಿದ್ದರು. ಭಗವಾನ್ ಬುದ್ಧ, ಶ್ರೀ ಶಂಕರಾಚಾರ್ಯರು, ಶ್ರೀ ಬಸವೇಶ್ವರರು, ಶ್ರೀ ಸಮರ್ಥ ರಾಮದಾಸರು – ಇಂಥವರ ಸಾಧನೆಯಲ್ಲಿ ಈ ಎರಡೂ ಆಯಾಮಗಳನ್ನು ನಿಚ್ಚಳವಾಗಿ ಕಾಣಬಹುದು. ಕೇವಲ ಆಧ್ಯಾತ್ಮಿಕ ಸಿದ್ಧಿಯಷ್ಟೆ ಅವರ ಗುರಿಯಾಗಿದ್ದಿದ್ದಲ್ಲಿ ಅವರು ಯಾವುದೋ ಕಾಡುಗಳ ಅಂತರಾಳದಲ್ಲಿ ಇರುತ್ತಿದ್ದರು. ಆದರೆ ಅವರು ಪ್ರತ್ಯಙ್ಮುಖರಾಗಿ ಉಳಿಯದೆ ಸಮಾಜಾಭಿಮುಖವಾಗಿ ದೇಶವನ್ನೆಲ್ಲ ಸಂಚರಿಸಿದರು. ಇಡೀ ಸಮಾಜವನ್ನು ಸಚೇತನಗೊಳಿಸಿದರು.

ಈ ದಿಕ್ಕಿನ ಪ್ರಯತ್ನಗಳಿಂದ ಜೀವನ ಸುಗಮವಾಗುತ್ತದೆ – ಎಂಬುದು ವ್ಯಾವಹಾರಿಕ ದೃಷ್ಟಿ. ಆದರೆ ನಮ್ಮ ಪಾರಂಪರಿಕ ಚಿಂತನೆ ಇನ್ನೂ ಒಂದು ಹೆಜ್ಜೆ ಮುಂದಿನದು. ವಿಶ್ವಾತ್ಮದೃಷ್ಟಿಗೆ ಹೊಂದುವಂಥ ಸಹಬಾಳ್ವೆ ಅವಶ್ಯ ಮಾತ್ರವಲ್ಲ, ಅದು ಆನಂದದಾಯಕವೂ ಆಗಿದೆ – ಎಂಬುದು ನಮ್ಮ ಹಿಂದಿನವರ ಚಿಂತನೆಯ ಆಶಯ.

ಕೆಲವು ವರ್ಷದ ಹಿಂದೆ ಮದರಾಸಿನ ಕಣ್ಣಾಸ್ಪತ್ರೆಗೆ ಒಬ್ಬ ವಯಸ್ಸಾದ ಮುದುಕರು ಬಂದು ಅಲ್ಲಿಯ ಸಿಬ್ಬಂದಿಗೆ ಹೇಳಿದರು: 'ಇಲ್ಲಿ ನಾಲ್ಕಾರು ಸಣ್ಣ ಕೆಲಸಗಳು ಇರಬಹುದು. ಅವುಗಳಲ್ಲಿ ನನ್ನಿಂದ ಆಗುವಂಥವನ್ನು ನಾನು ಮಾಡುತ್ತೇನೆ. ಇದಕ್ಕಾಗಿ ನನಗೆ ಸಂಬಳವೇನೂ ಕೊಡಬೇಕಾಗಿಲ್ಲ' ಎಂದು. ಆಸ್ಪತ್ರೆಯ ಸಿಬ್ಬಂದಿಗೆ ಸಂತೋಷವೇ ಆಯಿತು ಅಲ್ಲಿಂದಾಚೆಗೆ ಪ್ರತಿದಿನ ಒಂದಷ್ಟು ಹೊತ್ತು ಆತ ಬಂದು ಹೊಸ ರೋಗಿಗಳ ದಾಖಲಾತಿಗೆ ನೆರವಾಗುವುದು, ವಾರ್ಡಿನಲ್ಲಿ ರೋಗಿಗಳಿಗೆ ಬೇಕಾದ ಶುಶ್ರೂಷೆ ಮಾಡುವುದು, ರೋಗಿಗಳ ಬಳಿ ಕುಳಿತು ಸಾಂತ್ವನದ ಮಾತುಗಳನ್ನಾಡುವುದು – ಹೀಗೆ ಹಲವು ವಿಧಗಳಲ್ಲಿ ನೆರವಾಗುತ್ತಿದ್ದರು.

ಆತ ಒಬ್ಬ ನಿವೃತ್ತ ಅಧಿಕಾರಿ, ಕೆಲ ಸಮಯದ ಹಿಂದೆ ಪತ್ನಿಯನ್ನು ಕಳೆದುಕೊಂಡಿದ್ದ. ಹೀಗೆ ಉಂಟಾದ ಬಿಡುವನ್ನು ಯಾವುದಾದರೂ ಸಮಾಜಹಿತಕಾರಕ ಕೆಲಸಗಳಲ್ಲಿ ವಿನಿಯೋಗಿಸಬೇಕೆಂದು ಆತ ಮನಸ್ಸು ಮಾಡಿದ್ದ. ಹೀಗೆ ಒಂದು ಕಡೆ ಇತರರಿಗೆ ನೆರವಾಗುತ್ತಿದ್ದಂತೆ, ಇನ್ನೊಂದು ಕಡೆ ತನ್ನ ಅಂತರಂಗದ ನೆಮ್ಮದಿಯನ್ನು ಪಡೆದುಕೊಳ್ಳಲು ಆತ ಈ ಶ್ರೇಷ್ಠ ಮಾರ್ಗವನ್ನು ಗುರುತಿಸಿಕೊಂಡಿದ್ದ. ಸೇವೆಯ ಆನಂದ ಇಂಥದು.

ಹೊರನೋಟಕ್ಕೆ ಇದು ಅಗಾಧವಾದ ಕಾರ್ಯವೆನಿಸಿದರೂ ಅದರಿಂದ ಗಾಬರಿಪಡುವ ಅಗತ್ಯವಿಲ್ಲ. ಜನರಲ್ಲಿ ಸುಪ್ತವಾಗಿರುವ ಶಕ್ತಿಗೆ ಚೇತರಿಕೆಯುಂಟಾದರೆ ಅಲ್ಪಶ್ರಮದಿಂದ ಅತಿಶಯ ಸಾಧನೆ ಶಕ್ಯವಾಗುತ್ತದೆ. ಹಾಗೆ ನೋಡಿದರೆ ಇಂದು ದೇಶದ ಆಡಳಿತ ಸೂತ್ರಗಳನ್ನು ಹಿಡಿದವರ ಸಂಖ್ಯೆ ಎಷ್ಟಿದ್ದೀತು? ಕೆಲವು ಲಕ್ಷಗಳಷ್ಟೆ. ಆದರೆ ಸಮಾಜಕ್ಕೆ ತಮ್ಮ ತಮ್ಮ ರೀತಿಯಲ್ಲಿ ಶಕ್ಯವಿದ್ದಷ್ಟು ಸೇವೆ ಮಾಡಬಲ್ಲವರು ಕೋಟ್ಯಂತರ ಜನ ಇದ್ದಾರಲ್ಲ. ಇದರಿಂದ ಕೀರ್ತಿ ಬಂದೀತೊ ಇಲ್ಲವೊ. ಆದರೆ ಆನಂದವಂತೂ ನಿಶ್ಚಿತವಾಗಿ ದೊರೆಯುತ್ತದೆ.

ಹೆಸರು ಹೆಸರೆಂಬುದೇಂ? ಕಸರು ಬೀಸುವ ಗಾಳಿ ।
ಹಸೆಯೊಂದು ನಿನಗೇಕೆ ಬ್ರಹ್ಮಪುರಿಯೊಳಗೆ? ॥
ಶಿಶುವಾಗು ನೀಂ ಮನದಿ, ಹಸುವಾಗು, ಸಸಿಯಾಗು ।
ಕಸಬೊರಕೆಯಾಗಿಳೆಗೆ ॥ – ಮಂಕುತಿಮ್ಮ. [ಕಸರು=ಕೊಳೆ]

ಸಮಾಜದಲ್ಲಿ ಇರುವ 'ಪೊರಕೆ'ಯಂತೆ ನಮ್ರರಾದಾಗ, ಅಂಥ ಸಮಾಜದಲ್ಲಿ ಕಸ ಎಂದರೆ ದೀನತೆ – ದುಷ್ಪತನಗಳು ನೀಗಿ ಸೌರಭ ಹರಡುತ್ತದೆ.

ಲೋಕಾಭಿಮುಖ ಕರ್ಮ, ಭಗವದಭಿಮುಖ ಜಾಗೃತಿ – ಇವುಗಳ ನಡುವೆ ಸಮನ್ವಯವನ್ನು ಸಾಧಿಸಿದವರ ವ್ಯಾವಹಾರಿಕ ಜೀವನವೂ ದಕ್ಷತೆ–ನೆಮ್ಮದಿಗಳಿಂದ ಕೂಡಿರುತ್ತದೆ – ಎಂಬುದು ಲೋಕಾನುಭವ.

ಅಮೆರಿಕದ ಖ್ಯಾತ ತಾತ್ತ್ವಿಕ ಹೆನ್ರಿ ಡೇವಿಡ್ ಥೋರೋ ಮರಣಶಯ್ಯೆಯಲ್ಲಿದ್ದ. ಆಗ ಪಾದರಿಯೊಬ್ಬ ಬಂದು ಅವನನ್ನು ಕೇಳಿದ – 'Have you made peace with your God ?' – ನಿನ್ನ ದೇವರೊಡನೆ ನೀನು ಶಾಂತಿ–ಸಮಾಧಾನದಿಂದಿರುವೆ ತಾನೆ?. ಅದಕ್ಕೆ ಥೋರೋ ಉತ್ತರಿಸಿದ – 'ನಾನು ನನ್ನ ದೇವರೊಂದಿಗೆ ಎಂದೂ ಜಗಳವಾಡಿಯೇ ಇಲ್ಲ' (I never quarrelled with my God).

ಅಂತರ್ಬಾಹ್ಯ ಸಮನ್ವಯ ಸಾಧಿಸಿದವರ ದಾರಿ ಅದು. ಈ ಸ್ವಯಮನುಶಾಸನಕ್ಕೆ ಸಾಹಿತ್ಯ, ಸತ್ಸಂಗ ಮೊದಲಾದವೆಲ್ಲ ಸಹಾಯ ಮಾಡುತ್ತವೆ.

(ಅಕ್ಟೋಬರ್ 30–31, 2015ರಂದು ಬಾದಾಮಿ ತಾಲೂಕಿನ ಮಹಾಕೂಟದ ಶಿವಯೋಗಿ ಮಂದಿರದಲ್ಲಿ ನಡೆದ ಕಾರ್ಯಕರ್ತರ ಅಭ್ಯಾಸ ವರ್ಗದಲ್ಲಿ ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷ ಎಸ್.ಆರ್. ರಾಮಸ್ವಾಮಿ ಅವರು 'ಸ್ವದೇಶೀ' ಕುರಿತು ಮಾಡಿದ ಭಾಷಣದ ಪೂರ್ಣಪಾಠ.) ■

■ ಧನಂಜಯ್ ಕೆ.ಎಸ್.
ಉಪನ್ಯಾಸಕರು, ಕೋಡಂಬಳ್ಳಿ ಸರ್ಕಾರಿ ಪಿಯು ಕಾಲೇಜ್, ಚನ್ನಪಟ್ಟಣ

# ಬ್ರಿಟಿಷರ ಅನ್ಯಾಯದ ತೆರಿಗೆಯ ಸ್ಮಾರಕ 'ಸುಂಕದ ಬೇಲಿ'

ಬ್ರಿಟಿಷ್ ಆರ್ಥಿಕ ತಜ್ಞ ಆ್ಯಂಗಸ್ ಮ್ಯಾಡಿಸನ್ ಪ್ರಪಂಚದ ಎಲ್ಲ ಭಾಗಗಳ ಆರ್ಥಿಕ ಇತಿಹಾಸದ ಬಗ್ಗೆ ವ್ಯಾಪಕ ಸಂಶೋಧನೆ ನಡೆಸಿದಾತ. ಆತನ ವರದಿಯಂತೆ 2000 ವರ್ಷಗಳ ಹಿಂದೆ ಭಾರತದ ಜಿಡಿಪಿ 33% ಇತ್ತು. ಒಂದು ಸಾವಿರ ವರ್ಷಗಳ ಹಿಂದೆ 25% ಇತ್ತು. ಬ್ರಿಟಿಷರು ಭಾರತವನ್ನು ಬಿಟ್ಟು ಹೋದಾಗ ಕೇವಲ 3% ಗೆ ಇಳಿದಿತ್ತು. ಜಗತ್ತಿನಲ್ಲಿ ಶ್ರೀಮಂತ ದೇಶವಾಗಿದ್ದ ಭಾರತ ಬ್ರಿಟಿಷ್ ಆಳ್ವಿಕೆಯ ನಂತರ ಪ್ರಪಂಚದಲ್ಲಿ ಅತ್ಯಂತ ದಯನೀಯ ಸ್ಥಿತಿ ತಲುಪಿತ್ತು ಎಂದರೆ 250 ವರ್ಷಗಳಲ್ಲಿ ಬ್ರಿಟಿಷರು ಭಾರತವನ್ನು ಎಷ್ಟು ಕೊಳ್ಳೆ ಹೊಡೆದಿರಬಹುದು ಎಂಬುದರ ಸ್ಪಷ್ಟ ಚಿತ್ರಣ ಸಿಗುತ್ತದೆ.

ಅಂತೆಯೇ ದುಂಡು ಮೇಜಿನ ಸಮ್ಮೇಳನದಲ್ಲಿ ಮಹಾತ್ಮಾ ಗಾಂಧಿಯವರು, 'ನೀವು (ಬ್ರಿಟಿಷರು) ಭಾರತವನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಹೇಳಬಾರದಷ್ಟು ಅಧಃಪತನಕ್ಕೆ ತಳ್ಳಿದ್ದೀರಿ. ಅದನ್ನು ಸರಿಪಡಿಸಲು ತುಂಬಾ ವರ್ಷಗಳೇ ಬೇಕಾಗುತ್ತದೆ' ಎಂದು ತಮ್ಮ ರೋಷವನ್ನು ಹೊರ ಹಾಕಿದ್ದರು.

ಬ್ರಿಟಿಷರು ಭಾರತೀಯರನ್ನು ದೋಚುವುದಕ್ಕಾಗಿಯೇ ಅನೇಕ ಕಾನೂನುಗಳನ್ನು ಜಾರಿಗೊಳಿಸಿದ್ದರು. ದಿನಬಳಕೆಯ ವಸ್ತುಗಳ ಮೇಲೆ ನಿರ್ದಾಕ್ಷಿಣ್ಯ ತೆರಿಗೆ ವಿಧಿಸುತ್ತಿದ್ದರು. ಅದರಲ್ಲೂ ಮುಖ್ಯವಾಗಿ ಉಪ್ಪಿನ ಸಾಗಾಣಿಕೆಯ ಮೇಲೆ ಹದ್ದಿನ ಕಣ್ಣಿಡಲು, ತೆರಿಗೆ ಪಡೆಯಲು 2500 ಮೈಲು ಉದ್ದದ ಸುಂಕದ ಬೇಲಿಯನ್ನು ರೂಪಿಸಿದ್ದರು. ಇಂತಹದ್ದೊಂದು ಬೃಹತ್ತಾದ ಬೇಲಿಯ ಜಾಡುಹಿಡಿದು ಹೊರಟ ಬ್ರಿಟಿಷ್ ಸಂಶೋಧಕ ರಾಯ್ ಮ್ಯಾಕ್ಸ್‌ಹ್ಯಾಮ್ ದಾಖಲಿಸಿದ ಅಪೂರ್ವ ಅನುಭವಗಳ ಸಂಗ್ರಹರೂಪವೇ 'ಭಾರತದಲ್ಲೊಂದು ಸುಂಕದ ಬೇಲಿ' ಪುಸ್ತಕ. ಇತಿಹಾಸ ಪುಸ್ತಕಗಳಲ್ಲಿ ಇಲ್ಲದ ಬ್ರಿಟಿಷರ ಅಮಾನವೀಯ ಮುಖವೊಂದನ್ನು ಅನಾವರಣ ಮಾಡುತ್ತದೆ.

ರಾಯ್ ಮ್ಯಾಕ್ಸ್‌ಹ್ಯಾಮ್ ಸರ್ ಡಬ್ಲ್ಯು.ಎಚ್. ಸ್ಲೀಮನ್‌ರ 'Transit Duties in India – mode of collecting them' ಎಂಬ ಪುಸ್ತಕ ಓದಿದರು. ಅದರಲ್ಲಿ ಹೀಗೆ ದಾಖಲಾಗಿತ್ತು.

'ಉಪ್ಪಿನ ಮೇಲಿನ ಸುಂಕ ಸಂಗ್ರಹಣೆಗಾಗಿ ಒಂದು ರಾಕ್ಷಸೀ ವ್ಯವಸ್ಥೆ ರೂಪುಗೊಂಡಿತು. ಭಾರತದ ಭೂಭಾಗವನ್ನು ವ್ಯಾಪಿಸಿದ ಬೃಹತ್ ಬೇಲಿಯೊಂದನ್ನು ನಿರ್ಮಿಸಲಾಯಿತು. 1869ರಲ್ಲಿ ಈ ಬೇಲಿಯ ಉದ್ದ ಎರಡುಸಾವಿರದ ಮುನ್ನೂರು ಮೈಲು! ಸಿಂಧೂ ನದಿಯಿಂದ ಮದರಾಸಿನ ಮಹಾನದಿಯವರೆಗೆ ಈ ಬೇಲಿ ಹರಡಿತ್ತು, ಸುಮಾರು 12 ಸಾವಿರ ಜನ ಈ ಬೇಲಿಯ ಕಾವಲಿಗೆಂದೇ ನಿಯುಕ್ತರಾಗಿದ್ದರು. ಮುಳ್ಳಿನ ಗಿಡಗಳು, ಪೊದೆಗಳು, ಬಳ್ಳಿಗಳು, ಬೃಹದಾಕಾರದ ಮರಗಳಿಂದ ರಚಿತವಾಗಿದ್ದ ಇಂತಹ ಬೇಲಿಯನ್ನು, ಕರಸಂಗ್ರಹ ವ್ಯವಸ್ಥೆಯನ್ನು ಜಗತ್ತಿನ ಬೇರಾವ ನಾಗರಿಕ ದೇಶದಲ್ಲೂ ಕಾಣಲು ಸಾಧ್ಯವಿಲ್ಲ.'




ಮೂಲ ಲೇಖಕರು : ರಾಯ್ ಮ್ಯಾಕ್ಸ್‌ಹ್ಯಾಮ್

ಸಂಗ್ರಹ : ಎಸ್.ಎಸ್. ನರೇಂದ್ರಕುಮಾರ್

ಬೆಲೆ : ರೂ. 125.00

ಪುಟಗಳು : xxvi+154

ಪ್ರಕಾಶಕರು:
**ರಾಷ್ಟ್ರೋತ್ಥಾನ ಸಾಹಿತ್ಯ**

ಪ್ರತಿಗಳಿಗಾಗಿ ಸಂಪರ್ಕಿಸಿ:
**ರಾಷ್ಟ್ರೋತ್ಥಾನ ಸಾಹಿತ್ಯ**
ಕೇಶವ ಶಿಲ್ಪ, ಕೆಂಪೇಗೌಡನಗರ, ಬೆಂಗಳೂರು -19
ದೂ: 080-26612730

ಎಂಬ ಟಿಪ್ಪಣಿ ಮ್ಯಾಕ್ಸ್‌ಹ್ಯಾಮ್‌ರ ಗಮನ ಸೆಳೆಯಿತು. ಅವರು ಓದಿದ್ದ ಅಥವಾ ನಾವೆಲ್ಲರೂ ಓದಿದ್ದ ಯಾವ ಪುಸ್ತಕದಲ್ಲೂ ಸುಂಕದ ಬೇಲಿಯ ಕುರಿತ ಸಾಮಾನ್ಯ ಉಲ್ಲೇಖವೂ ಇಲ್ಲ. ಸ್ವಾತಂತ್ರ್ಯಕ್ಕಾಗಿ ಸುದೀರ್ಘ ಹೋರಾಟ ನಡೆದ ದೇಶದಲ್ಲಿ ಇದೊಂದು ಸೂಕ್ಷ್ಮವು ಜನರನ್ನು ಹೋರಾಟಕ್ಕೆ ಬಡಿದೆಬ್ಬಿಸುವ ಸಂಗತಿಯೂ ಆಗಿರಬೇಕಿತ್ತು. ನಿಜವಾಗಿ ಇಂಥದ್ದೊಂದು ಬೇಲಿ ಇದ್ದಿದ್ದೇ ಆಗಿದ್ದಲ್ಲಿ, ಅದು ಈಗಿರುವ ಜನರ ಮುತ್ತಾತಂದಿರ ಕಾಲದಲ್ಲಿ ಇದ್ದಿರಬೇಕು. ಹಾಗಾದರೆ ಭಾರತದ ಜನ, ಇತಿಹಾಸಕಾರರು ಇಷ್ಟು ಬೇಗ ಈ ಬೇಲಿಯನ್ನು ಮರೆತುಬಿಟ್ಟರೆ? ಸಹಜವಾಗಿ ಇದು ಭಾರತೀಯರಿಗೆ ಚುಚ್ಚಬೇಕಾದ ಪ್ರಶ್ನೆ. ಆದರೆ ಮ್ಯಾಕ್ಸ್ ಹ್ಯಾಮ್‌ಗೆ ಕಾಡಿತು. ಮ್ಯಾಕ್ಸ್ ಹ್ಯಾಮ್ ಪರಿಚಿತರು, ಲೇಖಕರು, ಇತಿಹಾಸಕಾರರು ಹೀಗೆ ಅನೇಕರನ್ನು ಈ ಕುರಿತು ವಿಚಾರಿಸಿದರೂ ಪ್ರಯೋಜನವಾಗಲಿಲ್ಲ.

ಗ್ರಂಥಾಲಯಗಳನ್ನು ತಡಕಾಡಿದರು. ವರದಿಗಳು, ಗೆಜೆಟಿಯರ್‌ಗಳು, ನಕಾಶೆಗಳನ್ನು ಅಧ್ಯಯನ ಮಾಡಿ ಮಾಹಿತಿ ಕಲೆಹಾಕಿದರು. ಸುಂಕದ ಬೇಲಿಯ ಅವಶೇಷಗಳ ಶೋಧನೆಗೆ ಮ್ಯಾಕ್ಸ್‌ಹ್ಯಾಮ್ ಮೂರು ವರ್ಷಗಳ ಅವಧಿಯಲ್ಲಿ ಮೂರು ಬಾರಿ ಭಾರತದಾದ್ಯಂತ ವ್ಯಾಪಕ ಶೋಧನೆ ಕೈಗೊಳ್ಳುತ್ತಾರೆ. ಪ್ರಾಚೀನ ಕಾಲದಿಂದ ರೂಢಿಯಲ್ಲಿದ್ದ ಸುಂಕದ ಪದ್ಧತಿ ಅಧ್ಯಯನ ಮಾಡಿದರು. ಭಾರತದಲ್ಲಿ ಮೌರ್ಯರ ಕಾಲದಿಂದ ಕೇವಲ ಭೂಕಂದಾಯವಿತ್ತು. ಆದರೆ ಮೊಘಲರ ಕಾಲದಲ್ಲಿ ಉಪ್ಪಿನ ತೆರಿಗೆಯನ್ನು ಮುಸ್ಲಿಮರು 2.5% ಪಾವತಿಸಿದರೆ ಹಿಂದೂಗಳು ಎರಡು ಪಟ್ಟು 5% ಪಾವತಿಸಬೇಕಾಗಿತ್ತು. ಬ್ರಿಟಿಷ್ ಆಳ್ವಿಕೆಯ ವೇಳೆ ವಿವಿಧ ಆಹಾರ ವಸ್ತುಗಳ ಮೇಲೆ ಅದರಲ್ಲೂ ಉಪ್ಪಿನ ಮೇಲೆ ವಿಧಿಸುತ್ತಿದ್ದ ತೆರಿಗೆ ಅಮಾನವೀಯತೆಯ ಪರಾಕಾಷ್ಠೆಯಾಗಿತ್ತು.

ಬ್ರಿಟಿಷರ ರಾಜಕೀಯ ಸಾಮ್ರಾಜ್ಯ, ಆರ್ಥಿಕ ಸಾಮ್ರಾಜ್ಯ ಜೊತೆ ಜೊತೆಯಾಗಿ ಬೆಳೆದ ಪರಿಣಾಮ 'ಸ್ವರ್ಗತುಲ್ಯ' ಎಂದು ವರ್ಣಿತವಾಗಿದ್ದ ಬಂಗಾಳ ದಯನೀಯ ಸ್ಥಿತಿ ತಲುಪಿತ್ತು. ಪ್ಲಾಸಿ, ಬಕ್ಸಾರ್ ಕದನಗಳ ಮೂಲಕ ಬಂಗಾಳ ನಂತರ ದೆಹಲಿಯನ್ನು ಆಕ್ರಮಿಸಿಕೊಂಡ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ ವಸಾಹತುಶಾಹಿವೆಂಬುದು ಹಗಲುಗಳ್ಳತನದ ಪರ್ಯಾಯವಾಚಿಯೇ ಆಗಿತ್ತು. ಕ್ರಮೇಣ ಲೂಟಿಯನ್ನು ಸುವ್ಯವಸ್ಥಿತಗೊಳಿಸುವುದಕ್ಕಾಗಿ ನಿಯಮಗಳೆಂಬ ಮುಖವಾಡಗಳು ರೂಪುಗೊಳ್ಳುತ್ತಾ ಹೋದವು. ಅವರು ಮಾಡಿದ್ದೇ ಕಾನೂನು, ಅವರು ವಿಧಿಸಿದ್ದೇ ತೆರಿಗೆ, ಅವರು ಹೇಳಿದ್ದೇ ನ್ಯಾಯನಿರ್ಣಯ, ಅವರು ಮಾಡಿದ್ದೆ ದಂಡನೆ. ವಾಸ್ತವವೆಂದರೆ ಸಾಮ್ರಾಜ್ಯಶಾಹಿಯೆಂಬುದೇ ಸುತರಾಂ ನೀತಿಗೆಟ್ಟ ಉಪಕ್ರಮವಾಗಿತ್ತು, ಹಿಂಸಾಚರಣೆಯೂ ಬಹುರೂಪಿ ಶೋಷಣೆಯೂ ಅದರ ಸಹಜ ಉತ್ಪನ್ನಗಳಾಗಿದ್ದವಷ್ಟೆ ಎಂಬ ವಿಷಯವನ್ನು ಮ್ಯಾಕ್ಸ್ ಹ್ಯಾಮ್ ನಿರ್ಭಯವಾಗಿ ದಾಖಲೆ ಸಮೇತ "ಭಾರತದಲ್ಲೊಂದು ಸುಂಕದ ಬೇಲಿ" ಪುಸ್ತಕದಲ್ಲಿ ತೆರೆದಿಡುತ್ತಾರೆ.

ಅರ್ಥಶಾಸ್ತ್ರಜ್ಞನಾದ ಆಡಂ ಸ್ಮಿತ್, 'ಭಾರತದಲ್ಲಿ ನಡೆದದ್ದು ಸೇನಾ ಪ್ರಾಬಲ್ಯಾಧಾರಿತ ಸರ್ವಾಧಿಕಾರ ಮತ್ತು ದಮನ ಧೋರಣೆಯೇ' ಎಂದು ತನ್ನ Wealth of Nations (1776) ಗ್ರಂಥದಲ್ಲಿ ದಾಖಲಿಸುವಂತೆ ಬ್ರಿಟಿಷರು ಬಂಗಾಳ, ದೆಹಲಿ, ಸಿಂಧ್, ಪಂಜಾಬ್ ಸೇರಿದಂತೆ ಇಡೀ ಭರತ ಖಂಡವನ್ನು ಅನೈತಿಕವಾಗಿ ಸ್ವತ್ವದಿಂದಲೇ ತೆಕ್ಕೆಗೆ

ತೆಗೆದುಕೊಂಡು ಉಪ್ಪಿನ ಕರದಿಂದ ನಿರ್ದಾಕ್ಷಿಣ್ಯವಾಗಿ ಶೋಷಿಸಿದರು. ಮ್ಯಾಕ್ಸ್‌ಹ್ಯಾಮ್ ಇದಕ್ಕೆ ಪೂರಕವಾಗಿ ಒಂದು ಉದಾಹರಣೆ ನೀಡುತ್ತಾರೆ. 1770ರಲ್ಲಿ ಬಂಗಾಳದಲ್ಲಿ ಭೀಕರ ಕ್ಷಾಮ ಉಂಟಾಯಿತು. ಮೊಘಲರಿಂದ ದಿವಾನಿ ಹಕ್ಕನ್ನು ಕಸಿದು ತೆರಿಗೆ ಕಟ್ಟುವಂತೆ ಪೀಡಿಸಿದಾಗ ಜನರು ಬಿತ್ತನೆ ಬೀಜ ಮಾರಿ ಕಂದಾಯ ಕಟ್ಟಿದರು. ಕ್ಷಾಮದಲ್ಲೂ ಕಂಪೆನಿ ನೂರಾರು ಲಕ್ಷ ಲಾಭ ಮಾಡಿತು. ಕ್ಷಾಮ ಪರಿಹಾರಕ್ಕಾಗಿ 3 ಕೋಟಿ ಜನರಿಗೆ ಕೇವಲ 90 ಸಾವಿರ ರೂಪಾಯಿ ಬಿಡುಗಡೆ ಮಾಡಿತು. ಇದಕ್ಕಿಂತ ರಾಕ್ಷಸೀಕೃತ್ಯ ಮತ್ತೊಂದು ಇರಲು ಸಾಧ್ಯವೇ? ಎಂಬ ಭಾವ ಈ ಪುಸ್ತಕ ಮಾಡಿಸುತ್ತದೆ.

ಭಾರತದ ಶಾಲಾ-ಕಾಲೇಜು ಪಠ್ಯಕ್ರಮದಲ್ಲಿ ಬ್ರಿಟಿಷರು ತಂದ ವಿವಿಧ ಕಾನೂನುಗಳ, ನಿಯಮಗಳ ಮಾಹಿತಿ ನೀಡಲಾಗಿದೆಯೇ ವಿನಾ ಬ್ರಿಟಿಷರು ನಡೆಸಿದ ನಿರ್ದಾಕ್ಷಿಣ್ಯ, ರಕ್ತ ಹೀರುವ ಅಮಾನವೀಯ ಸತ್ಯಸಂಗತಿಗಳನ್ನು ವ್ಯವಸ್ಥಿತವಾಗಿ ಮುಚ್ಚಿಡುವ ಪ್ರಯತ್ನ ಬ್ರಿಟಿಷರು ಮಾಡುತ್ತಾರೆ. ಸ್ವಾತಂತ್ರ್ಯ ನಂತರವೂ ಮುಚ್ಚಿಡುವ, ಬಚ್ಚಿಡುವ ಪ್ರಯತ್ನ ನಿರಂತರವಾಗಿ ನಡೆದಿದೆ. ಬದಲಿಗೆ ಭಾರತೀಯ ಪರಂಪರಾಗತ ಮೌಲ್ಯಗಳ ಬಗ್ಗೆ ಹೆಚ್ಚು ಮಾತನಾಡುವ ಇತಿಹಾಸಕಾರರ ಜಾಣ ಮರೆವು. ಬ್ರಿಟಿಷರ ದುರಾಡಳಿತದ ಅನಾವರಣಕ್ಕೆ ಕೈ ಹಾಕದಿರುವುದು ಇತಿಹಾಸಕ್ಕೆ ಮಾಡಿದ ದ್ರೋಹವೂ ಹೌದು ಎಂಬ ಚಿಂತನೆಯನ್ನು ಮ್ಯಾಕ್ಸ್ ಹ್ಯಾಮ್‌ರ 'ಭಾರತದಲ್ಲೊಂದು ಸುಂಕದ ಬೇಲಿ' ಪುಸ್ತಕ ಹುಟ್ಟು ಹಾಕುತ್ತದೆ.

ಕಂಪೆನಿಗೆ ಹೆಚ್ಚು ಲಾಭ ತರುವ ಉದ್ದೇಶದಿಂದ ರಾಬರ್ಟ್‌ಕ್ಲೈವ್, ವಾರನ್ ಹೇಸ್ಟಿಂಗ್ಸ್ ತೆರಿಗೆ ಸುಧಾರಣೆಗಳನ್ನು ತಂದರು. ಉಪ್ಪಿನ ತಯಾರಿಕೆ, ಸಾಗಾಣಿಕೆ ಮತ್ತು ಮಾರಾಟದ ಮೇಲೆ ಹಿಂದೆಂದೂ ಇಲ್ಲದ ನಿಯಮ, ನಿರ್ಬಂಧ ಹೇರಿದರು. ಬಂಗಾಳ ಪ್ರಾಂತದಲ್ಲಿ ಪರಂಪರಾಗತವಾಗಿ ಉಪ್ಪು ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದ ಸುಮಾರು 60ಸಾವಿರ ಮಾಲಂಗಿ ಪುರುಷರು ತಮ್ಮ ಕುಲಕಸುಬಿನಿಂದ ವಂಚಿತರಾದರು. ಗುತ್ತಿಗೆದಾರರು ಒಂದು ಮೌಂಡ್ (82 ಪೌಂಡ್) ಉಪ್ಪನ್ನು 50 ಪೈಸೆಗೆ ಖರೀದಿಸಿ 1 ರೂ. 50 ಪೈಸೆಗೆ ಮಾರಾಟ ಮಾಡಿ ಮಾಲಂಗಿಗಳ ರಕ್ತ ಹೀರಿದರು. ಕಂಪೆನಿ 1784-85ರಲ್ಲಿ ಕೇವಲ ಉಪ್ಪಿನಿಂದ 62,57,670 ರೂ. ಲಾಭ ಗಳಿಸಿತು! ಕಾಲ ಸರಿದಂತೆ ಉಪ್ಪಿನ ಮೇಲಿನ ತೆರಿಗೆ ಏರುತ್ತಾ 1823ರ ವೇಳೆಗೆ 1 ಮೌಂಡ್‌ಗೆ 12 ರೂಪಾಯಿ ಆಯಿತು. ಇದು ವಿಧಿಯಿಲ್ಲದೆ ಜನರು ಕಳ್ಳಸಾಗಾಣಿಕೆಯಲ್ಲಿ ತೊಡಗಿಕೊಳ್ಳುವಂತೆ ಪ್ರೇರೇಪಿಸಿತು. ವರ್ಷದಲ್ಲಿ ಎರಡು ತಿಂಗಳ ಆದಾಯವನ್ನು ಉಪ್ಪಿಗೆ ವ್ಯಯಿಸಬೇಕಾದ ದುಸ್ಥಿತಿ ಉದ್ಭವವಾಯಿತು. ಇದು ಜನರನ್ನು ಕಂಪೆನಿ ಉಗ್ರಾಣದಿಂದ ಕದಿಯಲು, ಅನಧಿಕೃತ ಉಪ್ಪು ತಯಾರಿಸಲು ಹಾಗೂ ಕಳ್ಳ ಸಾಗಾಣಿಕೆಗೆ ಪ್ರೇರೇಪಿಸಿತು. ಉಪ್ಪಿನ ತೆರಿಗೆ ಆದಾಯವು ಕಡಿಮೆಯಾಯಿತು.

ಬ್ರಿಟಿಷರು ಇದನ್ನು ತಡೆಗಟ್ಟಲು ಕರಸಂಗ್ರಹ ಕೇಂದ್ರ ತೆರೆದರು. ಕಳ್ಳಸಾಗಾಣಿಕೆ ನಡೆಯುವ ದೇಖಿಯನ್ನು ಗುರುತಿಸಿ, ಚೌಕಿಗಳನ್ನು ತೆರೆದರು. ಚೌಕಿಗಳು ಒಂದೇ ರೇಖೆಯಲ್ಲಿ ಬರುವಂತೆ ನಿರ್ಮಿಸಿ ಸುಂಕದ ರೇಖೆ ಎಂದು ಕರೆದರು. ಮತ್ತಷ್ಟು ಬಿಗಿಗೊಳಿಸುವ ನಿಟ್ಟಿನಲ್ಲಿ ರೇಖೆಯ ಉದ್ದಕ್ಕೂ ಒಣ ಬೇಲಿ ನಿರ್ಮಿಸಿದರು.

ಸುಂಕ ಪಡೆಯಲು, ತಪಾಸಣೆ ಮಾಡಲು, ಬಂಧಿಸುವ ಸಲುವಾಗಿ 12 ಸಾವಿರ ಸಿಬ್ಬಂದಿ ನೇಮಕವಾದರು. ಪರಿಣಾಮವಾಗಿ ಬ್ರಿಟಿಷರಿಗೆ 1869-70ರಲ್ಲಿ ಉಪ್ಪಿನಿಂದ 1 ಕೋಟಿ 25 ಲಕ್ಷ ರೂ. ಲಾಭ ತಂದಿತು. ಅಧಿಕಾರಿಗಳು ಕೆಳಹಂತದ ಸಿಬ್ಬಂದಿಗೆ ಕಿರುಕುಳ ನೀಡಿದರು. ಕೆಳಹಂತದ ಸಿಬ್ಬಂದಿ ಜನಸಾಮಾನ್ಯರಿಗೆ ತೀವ್ರ ಭ್ರಷ್ಟಾಚಾರ, ದೌರ್ಜನ್ಯದಿಂದ ಹಿಂಸಿಸಿದರು. ಒಟ್ಟಿನಲ್ಲಿ ಸುಂಕದ ಬೇಲಿ 'ಬ್ರಿಟಿಷರು ಭಾರತೀಯರ ಮೇಲೆ ಹೇರಿದ ಅನ್ಯಾಯದ ತೆರಿಗೆಯ ಸ್ಮಾರಕವಾಗಿತ್ತು'. 1979 ಏಪ್ರಿಲ್ 1 ರಿಂದ ಭಾರತಾದ್ಯಂತ ಉಪ್ಪಿನ ತೆರಿಗೆ ಏಕರೂಪತೆ ಪಡೆದಿದ್ದರಿಂದ ಸುಂಕ ರದ್ದಾಯಿತು. ಕ್ರಮೇಣ ಸುಂಕದ ಬೇಲಿ ಮರೆಯಾಯಿತು. ಅನೇಕ ಕಡೆ ಸುಂಕದ ಬೇಲಿ ಕಡಿದು ರಸ್ತೆ, ರೈಲು ಹಳಿ ಮತ್ತು ಸೇತುವೆ ನಿರ್ಮಾಣ ಮಾಡಲಾಯಿತು. ಹೀಗೆ ಒಂದು ಕಾಲದಲ್ಲಿ ಉಪ್ಪಿನ ಮೂಲಕ ಜನಸಾಮಾನ್ಯರನ್ನು ದುಸ್ಥಿತಿಗೆ ತಳ್ಳಿದ್ದ ಸುಂಕದ ಬೇಲಿ ಜನಮಾನಸದಿಂದ ಮರೆಯಾಯಿತು. ದುರ್ದೈವವೆಂದರೆ, ಇತಿಹಾಸಕಾರರ ದೃಷ್ಟಿಯಿಂದಲೂ ಕಣ್ಮರೆಯಾಯಿತು.

ಝಾನ್ಸಿ ಬಳಿಕ ಎರಿಚ್‌ನಲ್ಲಿ ರಾಧೇಶ್ಯಾಮ್ ಪೂಜಾರಿ ಮತ್ತು ಭಾಕಾನಗರದಲ್ಲಿ ಸಾಬಲ್‌ಸಿಂಗ್ ಮೂಲಕ ಹುಣಸೇಮರಗಳ ಸಾಲು, ಸುಂಕದ ಬೇಲಿ ಇರುವಿಕೆಯನ್ನು ಪ್ರತ್ಯಕ್ಷ ಕಂಡು, ನಕಾಶೆ, ಜಿಪಿಎಸ್‌ಗೂ ತಾಳೆಯಾದಾಗ ಸುಂಕದ ಬೇಲಿಯ ಅಸ್ತಿತ್ವ ಖಚಿತಗೊಳ್ಳುತ್ತದೆ. ಮ್ಯಾಕ್ಸ್ ಹ್ಯಾಮ್‌ರ ಛಲಬಿಡದ ಮೂರು ವರ್ಷಗಳ ಸಂಶೋಧನೆ ಮತ್ತು ಪ್ರವಾಸಗಳು ಫಲಿಸಿದ್ದವು. ಸುಂಕದ ಬೇಲಿ 'ಇರಲೇ ಇಲ್ಲ' ಎಂಬ ನಂಬಿಕೆ ಸುಳ್ಳಾಗಿ ಸುಂಕದ ಬೇಲಿಯ ಅವಶೇಷಗಳನ್ನು ಪತ್ತೆಹಚ್ಚುವಲ್ಲಿ ಮ್ಯಾಕ್ಸ್ ಹ್ಯಾಮ್‌ರ ವಿಶ್ವಾಸ, ಶ್ರಮ ಗೆದ್ದಿತು.

'ಭಾರತದಲ್ಲೊಂದು ಸುಂಕದ ಬೇಲಿ' ಪುಸ್ತಕ ಸೀಮಿತ ಮಾಹಿತಿಯೊಂದಿಗೆ ಸಂಶೋಧನೆ ನಡೆಸುವ ಪ್ರತಿಯೊಬ್ಬರಿಗೂ ಪ್ರೇರಣೆಯಾಗಬಲ್ಲದು. ಬ್ರಿಟಿಷರ ಅನೇಕ ಕರಾಳ ಮುಖಗಳನ್ನು, ಅದರಲ್ಲೂ ಉಪ್ಪಿನ ತೆರಿಗೆಯ ಅಮಾನವೀಯತೆಯನ್ನು ಜಗತ್ತಿನೆದುರು ತೆರೆದಿಟ್ಟ ಬಗೆ ಪುಸ್ತಕದಲ್ಲಿ ಉತ್ಕೃಷ್ಟವಾಗಿ ವ್ಯಕ್ತವಾಗಿದೆ.

ಆಂಗ್ಲಮೂಲದ ಅನುಭವ ಕಥನವನ್ನು ಸಂಗ್ರಹಿಸಿ ಅರ್ಥವತ್ತಾಗಿ, ಸೂಕ್ತ ಭಾಷೆ ಬಳಕೆಯೊಂದಿಗೆ ಕನ್ನಡ ಓದುಗರಿಗೆ ನೀಡಿರುವ ಎಸ್.ಎನ್. ನರೇಂದ್ರಕುಮಾರ್ ರವರ ಪ್ರಯತ್ನ ಅಭಿನಂದನಾರ್ಹ.

ಭಾರತದ ನೈಜ ಇತಿಹಾಸವನ್ನು ಮರೆಮಾಚುವ, ತಿರುಚುವ, ವಸಾಹತುಶಾಹಿ ಬೌದ್ಧಿಕ ಚಿಂತನೆಗಳನ್ನು ಬಯಲು ಮಾಡುವ ಅಗತ್ಯತೆ ಇದ್ದು, ಇಂತಹ ಸಂಶೋಧನೆಗಳು ಇತಿಹಾಸದ ಕರಾಳ ನಿಜಸ್ವರೂಪ ಅರಿಯುವ ಮೂಲಕ ಭವ್ಯ ಭಾರತ ನಿರ್ಮಾಣಕ್ಕೆ ಸಹಕಾರಿಯಾಗಬಲ್ಲವು. ■



# ಗೋಶಾಲೆಗೆ ಈಶ್ವರಪ್ಪ ಭೇಟಿ

ರಾಜ್ಯ ಗ್ರಾಮೀಣಾಭಿವೃದ್ಧಿ ಸಚಿವರಾದ ಕೆ.ಎಸ್. ಈಶ್ವರಪ್ಪ ಅವರು ದೊಡ್ಡಬಳ್ಳಾಪುರದ ಘಾಟಿ ಸುಬ್ರಹ್ಮಣ್ಯದಲ್ಲಿರುವ ರಾಷ್ಟ್ರೋತ್ಥಾನ ಗೋಶಾಲೆಗೆ ಮೇ 20ರಂದು ಭೇಟಿ ನೀಡಿದರು. ಗೋಶಾಲೆಯ ಚಟುವಟಿಕೆಗಳನ್ನು ವೀಕ್ಷಿಸಿದರು. ದೇಸೀ ಗೋತಳಿಗಳ ಸಂರಕ್ಷಣೆ, ಸಂವರ್ಧನೆಯ ಹಾಗೂ ಕಾಡು ಬೆಳೆಸುವ 'ವೃಂದಾವನ' ಯೋಜನೆಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಉಪಸ್ಥಿತರಿದ್ದರು.





ಹುಬ್ಬಳ್ಳಿಯ ರಾಷ್ಟ್ರೋತ್ಥಾನ ರಕ್ತನಿಧಿಯಲ್ಲಿ ನಡೆದ ರಕ್ತದಾನ ಶಿಬಿರ




ಉತ್ಥಾನ
ಮಾಸಪತ್ರಿಕೆ
ಕೇಶವಶಿಲ್ಪ, ಕೆಂಪೇಗೌಡನಗರ, ಬೆಂಗಳೂರು - 560 019
Ph : 080 - 26612730/31/32, 99452 74661
Email : utthana1965@gmail.com

ಬಿಡಿ ಪ್ರತಿ : ರೂ. 20
ವಾರ್ಷಿಕ ಚಂದಾ : ರೂ. 220



ಗಾತ್ರ: ¼ ಕ್ರೌನ್ ◆ ಪುಟಗಳು 112+4 ◆ ಬಹುವರ್ಣಗಳಿಂದ ಕೂಡಿದ ನಯನಾಕರ್ಷಕ ಮುದ್ರಣ

ಬನ್ನಿ, ಇಂದೇ ಚಂದಾದಾರರಾಗಿ
www.sahityabooks.com/shop/utthana/subscription


## ಶ್ರದ್ಧಾಂಜಲಿ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಸ್ವಯಂಸೇವಕರಾದ ಷಣ್ಮುಖಾಚಾರ್ಯ(77) ಅವರು ಜೂನ್ 6ರ ರಾತ್ರಿ ಸ್ವರ್ಗಸ್ಥರಾದರು. ರಾಷ್ಟ್ರೋತ್ಥಾನ ಪರಿಷತ್ ಅವರ ಚೇತನಕ್ಕೆ ಸದ್ಗತಿ ದೊರಕಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತದೆ.

ಷಣ್ಮುಖಾಚಾರ್ಯ ಅವರು ಆರೆಸ್ಸೆಸ್‌ನ ವಿವಿಧ ಜವಾಬ್ದಾರಿಗಳ ಜೊತೆಗೆ ಸಾಹಿತ್ಯ ಪ್ರಸಾರದ ದೃಷ್ಟಿಯಿಂದ ವಿಶಿಷ್ಟ ಸೇವೆ ಸಲ್ಲಿಸಿದವರು. ಅವರು ಕಳೆದ ಕೆಲವು ದಶಕಗಳಿಂದ ನಮ್ಮ ಸಾಹಿತ್ಯ ಪ್ರಕಟಣೆಗಳ ಪ್ರಸಾರದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಯಾವುದೇ ಪುಸ್ತಕ ಭಂಡಾರ ಎಂಬ ಮಳಿಗೆ ಇಟ್ಟುಕೊಳ್ಳದ ಅವರು ಪುಸ್ತಕಪ್ರಿಯರ ಒಂದು ದೊಡ್ಡ ಸಂಪರ್ಕ ಜಾಲವನ್ನೇ ರೂಪಿಸಿಕೊಂಡಿದ್ದರು. ನಮ್ಮ ಸಾಹಿತ್ಯಕೃತಿಗಳು ಬಿಡುಗಡೆಯಾದಾಗಲೆಲ್ಲ ಅವುಗಳನ್ನು ತರಿಸಿಕೊಂಡು ಸ್ವತಃ ಮನೆಮನೆಗೆ ತೆರಳಿ ಪುಸ್ತಕದ ಬಗೆಗೆ ಮಾಹಿತಿ ತಿಳಿಸಿ ಮಾರಾಟ ಮಾಡುತ್ತಾ ಬಂದವರು. ನಮ್ಮ ಸಾಹಿತ್ಯ ಪ್ರಕಟಣೆಯ ಸಾವಿರಾರು ಪ್ರತಿಗಳನ್ನು ಅವರು ಮಾರಾಟ ಮಾಡಿದ್ದಾರೆ. ಅವರ ದಿವ್ಯ ಚೇತನಕ್ಕೆ ನಮ್ಮ ಶತನಮನಗಳು.

– ಸಂಪಾದಕ

## ರಾಷ್ಟ್ರೋತ್ಥಾನ ಸಾಹಿತ್ಯ

ರಾಷ್ಟ್ರೋತ್ಥಾನ ಸಾಹಿತ್ಯ ಹಾಗೂ ಸದಭಿರುಚಿಯ ಇತರ ಪ್ರಕಾಶನ ಸಂಸ್ಥೆಗಳ ಸಾಹಿತ್ಯ ಕೃತಿಗಳ ಮಾರಾಟಕ್ಕಾಗಿ ಬೆಂಗಳೂರಿನ ಮೂರು ಕಡೆಗಳಲ್ಲಿ ಮಾರಾಟ ಕೇಂದ್ರಗಳನ್ನು ತೆರೆಯಲಾಗಿದೆ. ಈ ಮೂರೂ ಕೇಂದ್ರಗಳಲ್ಲಿ ಪ್ರತಿ ತಿಂಗಳು ಅತ್ಯಧಿಕ ಮಾರಾಟಗೊಂಡ ಹತ್ತು ಪುಸ್ತಕಗಳು.....

### ಏಪ್ರಿಲ್ 2020

1. **ಅಪ್ರತಿಮ ದೇಶಭಕ್ತ ಸ್ವಾತಂತ್ರ್ಯವೀರ ಸಾವರಕರ್***
   **ಲೇಖಕರು:** ಚಕ್ರವರ್ತಿ ಸೂಲಿಬೆಲೆ
   **ಬೆಲೆ:** ರೂ. 100.00

2. **ಮನಸ್ಸೇ ರಿಲಾಕ್ಸ್ ಪ್ಲೀಸ್***
   **ಲೇಖಕರು:** ಸ್ವಾಮಿ ಸುಖಬೋಧಾನಂದ
   **ಬೆಲೆ:** ರೂ. 120.00

3. Bunch of Thoughts*
   **ಲೇಖಕರು:** ಮಾ.ಸ. ಗೋಲ್ವಲ್‌ಕರ್
   **ಬೆಲೆ:** ರೂ. 225.00

4. **ಸರಳ ರಾಮಾಯಣ***
   **ಲೇಖಕರು:** ಜಿ.ಎ. ನರಸಿಂಹಮೂರ್ತಿ
   **ಬೆಲೆ:** ರೂ. 30.00

5. **ಪ್ರಾಚೀನ ಭಾರತದ ಮಹರ್ಷಿಗಳು (ಭಾಗ–1)***
   **ಲೇಖಕರು:** ಡಾ॥ ಎಸ್. ಹೇಮಲತಾ
   **ಬೆಲೆ:** ರೂ. 100.00

6. **ಭಾರತೀಯ ಕ್ಷಾತ್ರಪರಂಪರೆ***
   **ಲೇಖಕರು:** ಶತಾವಧಾನಿ ಆರ್. ಗಣೇಶ್
   **ಬೆಲೆ:** ರೂ. 250.00

7. **ಅಗ್ನಿಪಥಿಕೆ ನಿವೇದಿತಾ***
   **ಲೇಖಕರು:** ಎಸ್.ಆರ್. ರಾಮಸ್ವಾಮಿ
   **ಬೆಲೆ:** ರೂ. 100.00

8. **ಪ್ರಾಚೀನ ಭಾರತದಲ್ಲಿ ರಸಾಯನಶಾಸ್ತ್ರ***
   **ಲೇಖಕರು:** ಕೈವಾರ ಗೋಪಿನಾಥ್
   **ಬೆಲೆ:** ರೂ. 100.00

9. **ಬಾಲಪ್ರದೀಪ***
   **ಲೇಖಕರು:** ರುಕ್ಮಿಣಿ ನಾಯಕ್
   **ಬೆಲೆ:** ರೂ. 125.00

10. **ಕರುನಾಡ ಹುಲಿ ಧೊಂಡಿಯಾ***
    **ಲೇಖಕರು:** ಕ.ವೆಂ. ನಾಗರಾಜ
    **ಬೆಲೆ:** ರೂ. 100.00

* ಪ್ರಕಾಶಕರು : ರಾಷ್ಟ್ರೋತ್ಥಾನ ಸಾಹಿತ್ಯ / ಸಾಹಿತ್ಯ ಸಿಂಧು ಪ್ರಕಾಶನ

## ರಾಷ್ಟ್ರೋತ್ಥಾನ ರಕ್ತಕೇಂದ್ರ ಇಣುಕು ನೋಟ

ಸಮಾಜದ ನೋವು-ನಲಿವುಗಳಿಗೆ ದನಿಯಾಗುವ; ಸಮಾಜದಿಂದ ಸಮಾಜಕ್ಕೆ ಆಸರೆಯಾಗುವ ಉದ್ದೇಶದಿಂದ 'ರಾಷ್ಟ್ರೋತ್ಥಾನ ರಕ್ತಕೇಂದ್ರ' ಕಾರ್ಯ ಪ್ರವೃತ್ತವಾಗಿದೆ. ಈ ಕಾರ್ಯಕ್ಕಾಗಿ ರಾಜ್ಯದ ಅನೇಕ ಕಾಲೇಜುಗಳು ಹಾಗೂ ಸಂಘ-ಸಂಸ್ಥೆಗಳಲ್ಲಿ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಪ್ರತಿ ತಿಂಗಳ ರಕ್ತಕೇಂದ್ರದ ಚಟುವಟಿಕೆಯ ಅಂಕಿ-ಅಂಶಗಳನ್ನು ತೆರೆದಿಡುವ ಕಿಂಡಿಯಿದು.

### ಏಪ್ರಿಲ್ 2020

### ರಾಷ್ಟ್ರೋತ್ಥಾನ ರಕ್ತಕೇಂದ್ರ, ಬೆಂಗಳೂರು

| | | |
|---|---|---|
| ರಕ್ತದಾನ ಶಿಬಿರಗಳು | – | 13 |
| ಅ) ಸಂಘಸಂಸ್ಥೆ | – | 10 |
| ಆ) ಕಂಪೆನಿ | – | 01 |
| ಇ) ಶೈಕ್ಷಣಿಕ ಸಂಸ್ಥೆಗಳು | – | 01 |
| ರಕ್ತದಾನಿಗಳು | – | 1623 |
| ಸಂಗ್ರಹವಾದ ರಕ್ತದ ಯೂನಿಟ್ಸ್ | – | 3728 |
| ಫಲಾನುಭವಿಗಳು | – | 1105 |

**ಅತಿಹೆಚ್ಚು ರಕ್ತಸಂಗ್ರಹವಾದ 3 ಕೇಂದ್ರಗಳು:**

| | |
|---|---|
| ರಾಷ್ಟ್ರೀಯ ಸ್ವಯಂಸೇವಕ ಸಂಘ, ಯಲಹಂಕ, ಬೆಂಗಳೂರು | – 181 ದಾನಿಗಳು |
| ರಾಷ್ಟ್ರೀಯ ಸ್ವಯಂಸೇವಕ ಸಂಘ, ಜಯನಗರ, ಬೆಂಗಳೂರು | – 141 ದಾನಿಗಳು |
| ರಾಷ್ಟ್ರೀಯ ಸ್ವಯಂಸೇವಕ ಸಂಘ, ಹೆಬ್ಬಾಳ, ಬೆಂಗಳೂರು | – 139 ದಾನಿಗಳು |

**ಆಸರೆ**

- ನಿರಂತರ ರಕ್ತ ಪಡೆಯುವುದಕ್ಕಾಗಿ ಹೆಸರು ನೋಂದಾಯಿಸಿರುವ ತಲಸ್ಸೇಮಿಯಾ ('ಸಂರಕ್ಷಾ' ಹೊರತುಪಡಿಸಿ) ಫಲಾನುಭವಿಗಳು: 100 ಮಂದಿ.
- ಡಯಾಲಿಸಿಸ್ – 100ಕ್ಕೂ ಹೆಚ್ಚು ಫಲಾನುಭವಿಗಳು; ಪ್ರತಿ ತಿಂಗಳು (ರಿಯಾಯಿತಿ ಶುಲ್ಕದಲ್ಲಿ) ರಕ್ತ ಪೂರೈಸಲಾಗುತ್ತಿದೆ.

**'ಸಂರಕ್ಷಾ' – ತಲಸ್ಸೇಮಿಯಾ ಆರೈಕೆ ಕೇಂದ್ರ**

ತಲಸ್ಸೇಮಿಯಾ – ಈ ನ್ಯೂನತೆಯಿರುವ ಮಕ್ಕಳ ದೇಹದಲ್ಲಿ ಹಿಮೋಗ್ಲೋಬಿನ್ ಯುಕ್ತ ಗುಣಮಟ್ಟದ ರಕ್ತ ಉತ್ಪತ್ತಿಯಾಗುವುದಿಲ್ಲ. ಹೀಗಾಗಿ ತಿಂಗಳಿಗೆ 2 ಬಾರಿ (ಕೆಲವೊಮ್ಮೆ 20 ದಿನಗಳಿಗೊಮ್ಮೆ) ನಿರಂತರ ರಕ್ತಪೂರಣ (Blood Transfusion) ಅನಿವಾರ್ಯ. ಇಂತಹವರ ಆರೈಕೆಗಾಗಿ ಪರಿಷತ್ 'ಸಂರಕ್ಷಾ' ಎಂಬ ಮಕ್ಕಳ ಆರೈಕೆ ಕೇಂದ್ರವನ್ನು ಪ್ರಾರಂಭಿಸಿದೆ.

- 'ಸಂರಕ್ಷಾ'ದಿಂದ ಆರೈಕೆ ಪಡೆದವರು – 334 ಮಕ್ಕಳಿಗೆ 503 ಯೂನಿಟ್

**ಮಾಸಿಕ ವರ್ಗ:** ರಕ್ತಕೇಂದ್ರದ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳ ಗುಣಮಟ್ಟ ಹಾಗೂ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಮತ್ತು ಸಾಮಾಜಿಕ ಮೌಲ್ಯಗಳ ಬಗೆಗೆ ಅರಿವು ಮೂಡಿಸುವ ಉದ್ದೇಶದಿಂದ ಪ್ರತಿ ತಿಂಗಳು ಮಾಸಿಕ ವರ್ಗಗಳನ್ನು ನಡೆಸಲಾಗುತ್ತಿದೆ.

### ರಾಷ್ಟ್ರೋತ್ಥಾನ ರಕ್ತನಿಧಿ, ಹುಬ್ಬಳ್ಳಿ

| | | |
|---|---|---|
| ರಕ್ತದಾನ ಶಿಬಿರಗಳು | – | 03 |
| ರಕ್ತದಾನಿಗಳು | – | 346 |
| ಸಂಗ್ರಹವಾದ ರಕ್ತದ ಯೂನಿಟ್ಸ್ | – | 598 |
| ಫಲಾನುಭವಿಗಳು | – | 301 |

# ಮಳೆ, ಅಂತರ್ಜಲ ವೃದ್ಧಿಗೆ ಮರಗಳ ರಕ್ಷಣೆ, ಪೋಷಣೆ ಅಗತ್ಯ

**ದೊಡ್ಡಬಳ್ಳಾಪುರ:** ಮಳೆ ಹೆಚ್ಚಾಗಲು ಮತ್ತು ಅಂತರ್ಜಲ ಮಟ್ಟ ಹೆಚ್ಚಾಗಲು ಮರಗಳ ಪಾತ್ರ ಮಹತ್ತ್ವವಾದದ್ದು ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎನ್.ಎಂ. ನಾಗರಾಜ್ ಅವರು ತಿಳಿಸಿದರು.

ಅವರು ರಾಷ್ಟ್ರೋತ್ಥಾನ ಗೋಶಾಲೆ ಹಾಗೂ ಸ್ಥಳೀಯ ಪಂಚಾಯತ್‌ಗಳ ಸಂಯುಕ್ತ ಆಶ್ರಯದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು.

ಇಂದು ಖಾಲಿ ಸ್ಥಳಗಳಲ್ಲಿ ಹೆಚ್ಚುಹೆಚ್ಚು ಗಿಡಗಳನ್ನು ಬೆಳೆಸಬೇಕು. ಗಿಡಗಳನ್ನು ನೆಡುವ ಕೆಲಸದಷ್ಟೇ ನೆಟ್ಟಗಿಡಗಳನ್ನು ಉಳಿಸುವುದು ಬೆಳೆಸುವುದು ಸಹ ಬಹಳ ಮುಖ್ಯ. ಹಾಗೆಯೇ ಗ್ರಾಮ ಪಂಚಾಯತ್‌ಗಳಲ್ಲಿ ಹಾಗೂ ಇತರ ಅನುಷ್ಠಾನ ಇಲಾಖೆಯವರು ಪ್ರತಿಯೊಬ್ಬ ರೈತರಿಗೂ ನರೇಗಾ ಯೋಜನೆಯ ಮೂಲಕ ಗಿಡಗಳನ್ನು ನೆಟ್ಟು ಉಳಿಸಿ ಬೆಳೆಸಲು ಮಾಹಿತಿ ನೀಡಬೇಕು ಎಂದರು.

ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿ ಮುರುಡಯ್ಯ ಮಾತನಾಡಿ, ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಎಲ್ಲ ಸರ್ಕಾರೀ ಜಾಗಗಳಲ್ಲಿ ಗುಂಡುತೋಪು ಸ್ಮಶಾನ, ಸರ್ಕಾರೀ ಆಸ್ಪತ್ರೆ ಜಾಗದಲ್ಲಿ ಪ್ರತಿ ಗ್ರಾಮ ಪಂಚಾಯತಿಯ ಕನಿಷ್ಠ ಐದುನೂರು ಸಸಿಗಳನ್ನು ನೆಟ್ಟು ಪೋಷಿಸುವಂತೆ ಸೂಚಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಲಯ ಅರಣ್ಯ ಅಧಿಕಾರಿ ಭಾಸ್ಕರ್, ತಾಲ್ಲೂಕು ಅರಣ್ಯ ಅಧಿಕಾರಿ ಲಕ್ಷ್ಮರ್ ನಾಯಕ್, ಸಾಮಾಜಿಕ ಅರಣ್ಯ ಅಧಿಕಾರಿ ಲಕ್ಷ್ಮೀನಾರಾಯಣ್, ರಾಷ್ಟ್ರೋತ್ಥಾನ ಪರಿಷತ್ತಿನ ಜೀವನ್ ಕುಮಾರ್, ಚಂದ್ರು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗಂಗಭೈರಪ್ಪ ಉಪಸ್ಥಿತರಿದ್ದರು.

ಅರಣ್ಯ ಇಲಾಖೆಯ ವತಿಯಿಂದ ಗೋಶಾಲೆಯ ಪರಿಸರದಲ್ಲಿ 2 ಸಾವಿರ ವಿವಿಧ ರೀತಿಯ ಕಾಡು ಮರಗಳನ್ನು ಬೆಳೆಸುವ ಯೋಜನೆಯ ಭಾಗವಾಗಿ 60 ಸಸಿಗಳನ್ನು ನೆಡಲಾಯಿತು.











ತೆರೆದ ಅಂಚೆ
ಇವರಿಗೆ

ವ್ಯವಸ್ಥಾಪಕ ಸಂಪಾದಕ : ನಾ. ದಿನೇಶ್ ಹೆಗ್ಡೆ, ಸಂಪಾದಕ: ಅನಿಲ್ ಕುಮಾರ್ ಮೊಳಹಳ್ಳಿ, ಪ್ರಕಾಶನ : ರಾಷ್ಟ್ರೋತ್ಥಾನ ಪರಿಷತ್, ಕೆಂಪೇಗೌಡನಗರ, ಬೆಂಗಳೂರು – 560 019
ಮುದ್ರಣ : ರಾಷ್ಟ್ರೋತ್ಥಾನ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು 560 018. ದೂ.: 080-29741676 e-mail: rmudrana@gmail.com www.rashtrotthana.org